MAA ಫ್ರೆಂಡ್ಸ್ ಸಾರಥ್ಯದಲ್ಲಿ...

www.yuvamarga.com | Yuva Marga | yuva_marga_

# ಯುವ ಮಾರ್ಗ

YUVA MARGA NEWS PAPER — VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 05 | ಸಂಚಿಕೆ: 59 | ಶುಕ್ರವಾರ : 19–12–2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2–00

VOLUME: 05 | ISSUE: 59 | FRIDAY : 19–12–2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಪಲ್ಸ್ ಪೋಲಿಯೋ ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕು




ಯುವಮಾರ್ಗ ಸುದ್ದಿ

**ಮಾನ್ವಿ,ಡಿ.18–** ಪಟ್ಟಣದ ತಹಸೀಲ್ದಾರ್ ಕಚೇರಿ ಸಭಾಂಗಣದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ತಾಲೂಕು ಮಟ್ಟದ ಟಾಸ್ಕ್ ಪೋರ್ಸ್ ಸಭೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮದ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿ ತಾಲೂಕ ವೈದ್ಯಾಧಿಕಾರಿ ಡಾ.ಶರಣ ಬಸವರಾಜ ಮಾತನಾಡಿ ತಾಲೂಕಿನಾದ್ಯಂತ ಡಿ.21 ರಿಂದ ಡಿ.24 ರವರೆಗೆ ನಡೆಯಲಿರುವ ಪೋಲಿಯೊ ಮುಕ್ತ ಭಾರತ–ಪಲ್ಸ್ ಪೋಲಿಯೊ ಅಭಿಯಾನ ಅಂಗವಾಗಿ ಪೋಲಿಯೋ ಲಸಿಕೆಯನ್ನು ನೀಡುವುದಕ್ಕೆ 0–5 ವರ್ಷದ 47,920 ಮಕ್ಕಳನ್ನು ಆರೋಗ್ಯ ಇಲಾಖೆಯಿಂದ ಗುರುತಿಸಲಾಗಿದ್ದು ಲಸಿಕೆ ಹಾಕುವುದಕ್ಕೆ 221 ಟೀಮ್ ಗಳನ್ನು ರಚಿಸಲಾಗಿದೆ. ಹಾಗೂ33 ಸಂಚಾರಿ ಟೀಮ್ ಗಳ ಮೂಲಕ ವ್ಯಾಕ್ಸಿನ್ ಸಾಮಾಗ್ರಿಗಳನ್ನು ತಲುಪಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ . 442 ಆಶಾ,ಅಂಗನವಾಡಿ ಮತ್ತು ಆರೋಗ್ಯ ಇಲಾಖೆಯ ಕಾರ್ಯಕರ್ತರನ್ನು ಪೋಲಿಯೊ ವ್ಯಾಕ್ಸಿನ್ ಹಾಕಲು ನೇಮಿಸಲಾಗಿದೆ. 47 ಸೂಪರವೈಸರ್ ಗಳನ್ನು ಕೂಡ ನೇಮಿಸಲಾಗಿದೆ ತಾಲೂಕಿನ **(2ನೇಪುಟಕ್ಕೆ..)**

## ದ್ವೇಷ ಭಾಷಣ: ಗದ್ದಲ, ಕೋಲಾಹಲ

**ಬೆಳಗಾವಿ, ಡಿ. 18–** ರಾಜ್ಯದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿರುವ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕಕ್ಕೆ ವಿಧಾನಸಭೆಯಲ್ಲಿಂದು ಪ್ರತಿಪಕ್ಷಗಳ ವಿರೋಧ, ಧರಣಿ, ಗದ್ದಲದ ನಡುವೆಯೇ ಅಂಗೀಕಾರ ದೊರಕಿತು.

ವಿಧಾನಸಭೆಯಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧೇಯಕವನ್ನು ಪರ್ಯಾಲೋಚಿಸುವಂತೆ ಕೋರಿದ ನಂತರ ಪ್ರತಿಪಕ್ಷ ನಾಯಕ ಆರ್. ಅಶೋಕ್ ವಿಧೇಯಕದ ಮೇಲೆ ಮಾತನಾಡುವಾಗ ಮಧ್ಯ ಪ್ರವೇಶಿಸಿ ಮಾತನಾಡಿದ ಸಚಿವ ಬೈರತಿ ಸುರೇಶ್, ಕರಾವಳಿ ಪ್ರದೇಶವನ್ನು ಕುರಿತು ಬಳಸಿದ ಪದ ಸದನದಲ್ಲಿ ಕಿಚ್ಚಿಗೆ ಕಾರಣವಾಗಿ ಪ್ರತಿ ಪಕ್ಷಗಳ ಸದಸ್ಯರು ಸಚಿವ ಬೈರತಿ ಸುರೇಶ್ ವಿರುದ್ಧ ಮುಗಿಬಿದ್ದು ಅವರ ಮಾತನ್ನು ಕಡತದಿಂದ ತೆಗೆಯಬೇಕು. ಸಚಿವ ಬೈರತಿ ಸುರೇಶ್ ಕರಾವಳಿ ಬಗ್ಗೆ ಬಳಸಿರುವ ಪದ ಸರಿಯಲ್ಲ ಎಂದು ಆಕ್ರೋಶ ಹೊರ ಹಾಕಿ ಧರಣಿ ಆರಂಭಿಸಿದರು.

ಈ ಹಂತದಲ್ಲಿ ಸದನದಲ್ಲಿ ಗದ್ದಲ ಹಾಗೂ ಕೋಲಾಹಲದ ವಾತಾವರಣ ರೂಪುಗೊಂಡಿತು ಈ ಗದ್ದಲ, ಧರಣಿ ನಡುವೆಯೇ ಸಭಾಧ್ಯಕ್ಷ ಯು.ಟಿ. ಖಾದರ್ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ



ಅಂಗೀಕಾರ ಪ್ರಕ್ರಿಯೆಯನ್ನು ಕೈಗೆತ್ತಿಕೊಂಡು ಅಂಗೀಕಾರ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು.

ವಿಪಕ್ಷಗಳ ಗದ್ದಲ, ಕೂಗಾಟದ ನಡುವೆಯೇ ಸಭಾಧ್ಯಕ್ಷರು ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ವಿಧೇಯಕ ಅಂಗೀಕಾರವಾಗಿದೆ ಎಂದು ಹೇಳಿ ಸದನವನ್ನು ಭೋಜನ ವಿರಾಕಮಕ್ಕೆ ಮುಂದೂಡಿದರು. ಈ ಕಾಯ್ದೆ ಬಗ್ಗೆ ಸದನದಲ್ಲಿ ಪೂರ್ಣ ಪ್ರಮಾಣದ ಚರ್ಚೆ ಆಗದೆ ತರಾತುರಿಯಲ್ಲಿ ಕಾಯ್ದೆ ಅಂಗೀಕಾರ ಪ್ರಕ್ರಿಯನ್ನು ಮುಗಿಸಿದ್ದು, ವಿಪಕ್ಷದ ಸದಸ್ಯರ ಸಿಟ್ಟಿಗೆ ಕಾರಣವಾಗಿ ಅವರುಗಳು ಆಕ್ರೋಶ ವ್ಯಕ್ತಪಡಿಸಿದರಾದರೂ

ವಿಪಕ್ಷಗಳ ಸದಸ್ಯರ ಆಕ್ರೋಶವನ್ನು ಸರ್ಕಾರ ಲೆಕ್ಕಕ್ಕೆ ತೆಗೆದುಕೊಳ್ಳದೆ ವಿಧೇಯಕಕ್ಕೆ ಅಂಗೀಕಾರ ಪಡೆಯುವಲ್ಲಿ **(2ನೇಪುಟಕ್ಕೆ)**

## ಡಿ.21ಕ್ಕೆ ನದಾಫ್/ಪಿಂಜಾರ ಸಮಾವೇಶ : ಮೌಲಸಾಬ ಗಣದಿನ್ನಿ

ಯುವಮಾರ್ಗ ಸುದ್ದಿ

**ಲಿಂಗಸುಗೂರು,ಡಿ.18–** ಕರ್ನಾಟಕ ರಾಜ್ಯ ನದಾಫ್/ಪಿಂಜಾರ ಸಂಘ ಕಲಬುರಗಿ ವಿಭಾಗ ಮಟ್ಟದ ಸಮಾವೇಶವನ್ನು ಡಿ.21ಕ್ಕೆ ಹಟ್ಟಿ ಚಿನ್ನದಗಣಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಮೌಲಾ ಸಾಬ ಗಣದಿನ್ನಿ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪ್ರವಾದಿ ಮೊಹಮ್ಮದ್ ಪೈಗಂಬರ್(ಸ್ವ)ರ 1500ನೇ ಜನ್ಮ ದಿನೋತ್ಸವ ನಿಮಿತ್ಯ ಹಮ್ಮಿಕೊಂಡಿರುವ ಸಮಾವೇಶದಲ್ಲಿ ನದಾಫ್ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಕಲ್ಯಾಣ ಕರ್ನಾಟಕ ಸಾಧಕರಿಗೆ ಸನ್ಮಾನ, ತಾಲೂಕಿನ ಸರಕಾರಿ ನೌಕರರಿಗೆ, ಹಾಫಿಜ್, ಆಲಿಂ, ಹಾಜಿಗಳಿಗೆ, ಚಿನ್ನದಗಣಿ ನೌಕರರಿಗೆ, ವೈದ್ಯರು, ಇಂಜಿನಿಯರುಗಳಿಗೆ ಸನ್ಮಾನಿಸಿ ಗೌರವಿಸಲಾಗುವುದು. ಹಟ್ಟಿ ಚಿನ್ನದಗಣಿ ಸ್ವರ್ಣ ಭವನದ ಹತ್ತಿರ ಸಮಾವೇಶ ಜರುಗಲಿದ್ದು, ಇದರಲ್ಲಿ ಸಚಿವರಾದ ಎನ್‌ಎಸ್ ಬೋಸ




ರಾಜು, ಸಂಸದರು, ಶಾಸಕರುಗಳು, ವಿಧಾನಪರಿಷತ್ ಸದಸ್ಯರುಗಳು, ಮಾಜಿ ಶಾಸಕರು, ಸಂಸದರು, ಕೇಂದ್ರ ಸಚಿವರು ಸೇರಿ ಸಂಘದ ರಾಜ್ಯಾಧ್ಯಕ್ಷರು, ರಾಜ್ಯ ಸಮಿತಿ ಮುಖಂಡರು ಪಾಲ್ಗೊಳ್ಳಲಿದ್ದಾರೆ ನದಾಫ್/ಪಿಂಜಾರ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಮಾವೇಶವನ್ನು ಯಶಸ್ವಿಗೊಳಿಸಬೇಕು. ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡರು ಕರ ಪತ್ರಗಳನ್ನು ಬಿಡುಗಡೆ ಮಾಡಿದರು.

ಕಲಬುರಗಿ ವಿಭಾಗದ ಉಪಾಧ್ಯಕ್ಷ ಮಹೆಬೂಬಸಾಬ ಸಂತೆಕೆಲ್ಲೂರು, ರಾಜ್ಯ ಸಮಿತಿ ಸದಸ್ಯರಾದ ಖಾದರಸಾಬ ಅಂ ಗಡಿ ಆನೆಹೊಸೂರು, ಮಹ್ಮದ್ ಖಾಜಾ ಹುಸೇನ್ ಪತ್ರಕರ್ತರು ಮೌನು ದ್ದೀನ್ ಬೂದಿಹಾಳ, ಯಮನೂರ ನದಾಪ್, ತಾಲೂಕು ಅಧ್ಯಕ್ಷ ಟಿ.ಅಮೀನುದ್ದೀನ್ ಜಾಂತಾಪೂರ, ಉಪಾಧ್ಯಕ್ಷ ಬಿ. ಅಮೀನು ದ್ದೀನ್ ಬಂಡಿ (ಅಮ್ಮಿ), ಹಟ್ಟಿಘಟ ಕದ ಉಪಾಧ್ಯಕ್ಷ ಖಾಜಾಹುಸೇನ್ ಬಂಗಾರಿ ಸೇರಿದಂತೆ ಇದ್ದರು.

## ಅಭಿವೃದ್ಧಿ ಕಾರ್ಯಕ್ಕೆ ಸರ್ವ ಸದಸ್ಯರ ಬೆಂಬಲ ಪಡೆಯುವೆ: ಸುರೇಶ ಹರಸೂರು

ಯುವಮಾರ್ಗ ಸುದ್ದಿ

**ಮಸ್ಕಿ,ಡಿ.18–**ಇಲ್ಲಿನ ಪುರಸಭೆಗೆ ಎರಡನೇ ಅವಧಿಗೆ ನೂತನ ಅಧ್ಯಕ್ಷರಾಗಿ ಸುರೇಶ ಹರಸೂರು ಗುರುವಾರ ಅಧಿಕಾರ ಸ್ವೀಕರಿಸಿದರು. ಖ.15 ರಂದು ನಡೆದ ಚುನಾವಣೆಯಲ್ಲಿ ಸುರೇಶ ಹರಸೂರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಅಧಿಕಾರ ಸ್ವೀಕರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಪುರಸಭೆ ಕಾರ್ಯಾಲಯದಲ್ಲಿನ ಅಧ್ಯಕ್ಷರ ಕೊಠಡಿಯಲ್ಲಿ ಗುರುವಾರ ಪೂಜೆ ನೆರವೇರಿಸಿದ ನಂತರ ಅಧ್ಯಕ್ಷರ ಕುರ್ಚಿಯಲ್ಲಿ ಅಸೀನರಾಗುವ ಮೂಲಕ ಸುರೇಶ ಹರಸೂರು ಅಧಿಕಾರ ಸ್ವೀಕರಿಸಿ ಮಾತನಾಡಿ, ಪಟ್ಟಣದ ಸಮಗ್ರ ಅಭಿವೃದ್ಧಿ ಹಾಗೂ ಮೂಲಸೌಲಭ್ಯ ಕಲ್ಪಿಸಲು ಹಗಲಿರುಳು ಶ್ರಮಿಸುವುದಾಗಿ ಭರವಸೆ ನೀಡಿದರು. ಅಭಿವೃದ್ಧಿ ಕಾರ್ಯಕ್ಕೆ ಸರ್ವ ಸದಸ್ಯರ ಬೆಂಬಲ ಪಡೆಯಲಾಗುವುದು. ಜನರ ನಿರೀಕ್ಷೆಯಂತೆ ಪಟ್ಟಣದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು




ಎಂದರು.

ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಈ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ಪಟ್ಟಣದ ಎಲ್ಲಾ 23 ವಾರ್ಡುಗಳಲ್ಲಿ ಹಲವಾರು ಸಮಸ್ಯೆಗಳಿವೆ. 23 ಸದಸ್ಯರಿಂದ ಪಕ್ಷತೀತವಾಗಿ ಸಹಕಾರ ಪಡೆದುಕೊಂಡು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಬೇಕು. ಜನ ಸಮಾನ್ಯರನ್ನು ಕಾರ್ಯಾಲಯಕ್ಕೆ ಪದೇ ಪದೇ ಅಲೆದಾಡಿಸುವ ಕೆಲಸ ಮಾಡಬಾರದು. ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು ಜನ ಸಾಮಾನ್ಯರ ಸಮಸ್ಯೆಗಳನ್ನು ಅರಿತುಕೊಂಡು ಕಾನೂನಾತ್ಮಕವಾಗಿ ಮಾಡುವುದಿದ್ದರೆ ಮಾಡಿ ಮುಗಿಸಬೇಕು. ಕಾನೂನು ತೊಡಕುಗಳಿದ್ದರೆ ತಿಳಿ ಹೇಳುವ ಕೆಲಸ ಮಾಡಬೇಕಾಗಿದೆ. ಜನರ ನೀರಿಕ್ಷೆಯಂತೆ ಪಟ್ಟಣದಲ್ಲಿ ಅಭಿವೃದ್ಧಿ ಮಾಡಿ ಮಾದರಿ ಪುರಸಭೆಯಾಗಿಸಬೇಕೆಂದರು.

ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ, ಮಾಹಾದೇವಪ್ಪಗೌಡ, ಅಪ್ಪಾಜಿಗೌಡ, ಡಾ.ಬಿ.ಹೆಚ್.ದಿವಟರ್ ಮಾತನಾಡಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಪುರಸಭೆ ಉಪಾಧ್ಯಕ್ಷೆ ಗೀತಮ್ಮ ಶಿವರಾಜ, ಸ್ಥಾಯಿ ಸಮಿತಿ ಅಧ್ಯಕ್ಷ ಚೇತನ ಪಾಟೀಲ್, ಬಿಜೆಪಿ ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ ಸೇರಿದಂತೆ ಪುರಸಭೆ ಸದಸ್ಯರು, ಬಿಜೆಪಿ ಪಕ್ಷದ ಮುಖಂಡರು ಮತ್ತು ಪುರಸಭೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿದ್ದರು.

## ಹಿರಿತನದ ಅಧಾರದ ಮೇಲೆ ಹುದ್ದೆಗೆ ನೇಮಕ ಮಾಡಿ: ಕೆ.ಎಸ್.ನಾಡಗೌಡ

ಯುವಮಾರ್ಗ ಸುದ್ದಿ

**ರಾಯಚೂರು,ಡಿ.18–**ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೆಲವು ತಿಂಗಳುಗಳಿಂದೆ ಕಂಪ್ಯೂಟರ್ ಅಪರೇಟರ್ ಎಂದು ತೆಗೆದುಕೊಂಡಿದ್ದವರಿಗೆ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ನೇಮಕ ಮಾಡಿದ ಆದೇಶವನ್ನು ಕೂಡಲೇ ರದ್ದು ಮಾಡಿ, ಹದಿಮೂರು ವರ್ಷಗಳಿಂದ ಕೆಲಸ ಮಾಡುವವರಿಗೆ ಹಿರಿತನದ ಅಧಾರದ ಮೇಲೆ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ನೇಮಕ ಮಾಡುವಂತೆ ರಾಯಚೂರಿನ ಸಹಕಾರ ಸಂಘದ ಉಪ ನಿಬಂಧಕರಿಗೆ ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರು ಹಾಗೂ ಮಾಜಿ ನಿರ್ದೇಶಕರು ಮನವಿ ಸಲ್ಲಿಸಿ ಒತ್ತಾಯಿಸಿದರು.

ಈ ವೇಳೆ ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಕೆ.ಎಸ್.ನಾಡಗೌಡ ಅವರು ಮಾತನಾಡಿ, ಜಾಲಹಳ್ಳಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಶರಣಬಸವ ತಂದೆ ಶಿವಣ್ಣ ಹಂಪರಗುಂದಿ ಇವರು ಗುಮಾಸ್ತನಾಗಿ ನೇಮಕಗೊಂಡು ಸುಮಾರು 13 ವರ್ಷಗಳಿಂದ ಕೇವಲ 3 ಸಾವಿರ ರೂ. ಹಣ ಸಂಭಾವನೆಗೆ ದುಡಿಯುತ್ತಾ ಬಂದಿದ್ದಾನೆ. ಪ್ರಭಾರಿ ಕಾರ್ಯದರ್ಶಿಯಾಗಿದ್ದ ರವಿಕುಮಾರ ಕೋರಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಆಡಳಿತಾಧಿಕಾರಿಗಳು ಸಹಕಾರ ಇಲಾಖೆಯ ಕಾನೂನಿನಂತೆ ಹಿರಿತನದ ಆದರದ ಮೇಲೆ ಶರಣಬಸವ ತಂದೆ ಶಿವಣ್ಣ




ಇವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ಆದೇಶ ನೀಡಿದ್ದರು. ಆದರೆ ಉದ್ದೇಶ ಪೂರ್ವಕವಾಗಿ ಸೂಪರ್ವೈಸರ್ ಮಹೀಬೂಬ್ ಅವರನ್ನು ತೆಗೆದುಕೊಳ್ಳುವ ಸಲುವಾಗಿ ರಾಯಚೂರಿನ ಆರ್.ಡಿ.ಸಿ.ಸಿ ಬ್ಯಾಂಕ್ ಅಧಿಕಾರಿಗಳಿಂದ ಪತ್ರ ಬರೆದು ಶರಣಬಸವ ತಂದೆ ಶಿವಣ್ಣ ಅವರ ಆದೇಶವನ್ನು ರದ್ದು ಮಾಡಲಾಗಿದೆ ಎಂದರು.

ಕೇವಲ ಒಂದು ವರ್ಷದ ಹಿಂದೆ ಕಂಪ್ಯೂಟರ್ ಆಪರೇಟರ್ ಎಂದು ತೆಗೆದು ಕೊಂಡವರಿಗೆ ಕಾನೂನನ್ನು ಗಾಳಿಗೆತೂರಿ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ನೇಮಕ ಆದೇಶ ನೀಡಿದ್ದಾರೆ. ಇದರಿಂದ 13 ವರ್ಷಗಳಿಂದ ಕೆಲಸ ಮಾಡುತ್ತಿದ್ದವರಿಗೆ ಅನ್ಯಾಯ ಮಾಡಲಾಗಿದೆ. ಶರಣಬಸವ ಪದವಿದರರಾಗಿದ್ದು, ಅವರು ಸಹಕಾರ ಇಲಾಖೆ ನೀಡುವ ತರಬೇತಿಯನ್ನು ಸಹ ಪಡೆದು ಉತ್ತೀರ್ಣನಾಗಿದ್ದಾನೆ. ಅಲ್ಲದೆ ಶರಣಬಸವ ಅವರು ಕಡು ಬಡವನ್ನಾಗಿದ್ದೇನೆ. ಶರಣಬಸವ ತಂದೆ ಶಿವಣ್ಣ ಇವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ಮುಂದುವಸಬೇಕು. ಒಂದು ವೇಳೆ ಮುಂದು ವರ್ಷದಿದ್ದರೆ ಜಾಲಹಳ್ಳಿ ಕೃಷಿ ದಿನ ಸಹಕಾರ ಸಂಘದ ಮುಂದೆ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು. ಅಲ್ಲದೆ ಮುಂದೆ ಆಗುವ ಅನಾಹುತಗಳಿಗೆ ಅಧಿಕಾರಿಗಳೇ **(2ನೇಪುಟಕ್ಕೆ)**

## ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾನೂನು ಸಲಹೆಗಾರರ ನೇಮಕಕ್ಕೆ ಅರ್ಜಿ ಆಹ್ವಾನ

ಯುವಮಾರ್ಗ ಸುದ್ದಿ

**ರಾಯಚೂರು,ಡಿ.18–**ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಭೂ ಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಜಿಲ್ಲಾದಿಕಾರಿಗಳಿಗೆ ಕಾನೂನಿನ ಸಲಹೆ ನೀಡಲು ಕಾನೂನು ಸಲಹೆಗಾರರನ್ನು ನೇಮಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.



ಸರ್ಕಾರದ ಆದೇಶಗಳನ್ವಯ ಈ ಹಿಂದೆ ನೇಮಿಸಲಾದ ಕಾನೂನು ಸಲಹೆಗಾರರು ಹುದ್ದೆಗೆ ರಾಜೀನಾಮೆಯನ್ನು ನೀಡಿರುವುದರಿಂದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಕಾನೂನು ಸಲಹೆಗಾರರ ಹುದ್ದೆಯು ಖಾಲಿ ಇರುತ್ತದೆ. ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ಭೂಕಂದಾಯ, ಭೂ ಮಂಜೂರಾತಿ ನಿಯಮ, ಭೂಸುಧಾರಣಾ, ಭೂಸ್ವಾಧೀನ ಕಾಯ್ದೆ, ನಿಯಮ, ಇನ್ನಿತರ ಕಾಯ್ದೆ, ನಿಯಮಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಹಾಗೂ ಯಾವುದೇ ನ್ಯಾಯಾಲಯ ವ್ಯಾಜ್ಯಗಳ ಬಗ್ಗೆ ಕಾನೂನು ಸಲಹೆ ನೀಡಲು ಸೃಜಿಸಲಾಗಿರುವ ಕಾನೂನು ಸಲಹೆಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನ್ಯಾಯಾಧೀಶರು, ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ (ನಿವೃತ್ತ ವಿಶೇಷ ಜಿಲ್ಲಾಧಿಕಾರಿ) ಗಳಿಗೆ ಕರ್ತವ್ಯಗಳು, ಜವಾಬ್ದಾರಿಗಳನ್ನು ಮತ್ತು ಮೇಲಾದಿಕಾರಿಗಳ ಸೂಚನೆಗಳು ಕಡ್ಡಾಯವಾಗಿ ಪಾಲಿಸಬೇಕು.

ಷರತ್ತಿಗೊಳಪಟ್ಟು ಕಾನೂನು ಸಲಹೆಗಾರರಿಗೆ ಒಂದು ನಿರ್ದಿಷ್ಟ ಏಕರೂಪದ ಸಂಚಿತ ವೇತನವನ್ನು ನಿಗಧಿಪಡಿಸಿ ಅಂತಹ ವೇತನದ ಮೇರೆಗೆ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸಲು ಅಸಕ್ತಿಯುಳ್ಳ ನಿವೃತ್ತ ಸರ್ಕಾರಿ, ನ್ಯಾಯಾಂಗ ಇಲಾಖೆಯ ಅಧಿಕಾರಿಗಳನ್ನು ನಿವೃತ್ತ ನ್ಯಾಯಾಧೀಶರು, ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ (ನಿವೃತ್ತ ವಿಶೇಷ ಜಿಲ್ಲಾಧಿಕಾರಿ) ಇವರಿಗೆ 70,000 ಸಾವಿರ ರೂ. ಹಾಗೂ ನಿವೃತ್ತ ಕಂದಾಯ ಇಲಾಖೆ ನೌಕರರು (ನಿವೃತ್ತ ತಹಶೀಲ್ದಾರ್, ಉಪತಹಶೀ ಲ್ದಾರ್) ಇವರಿಗೆ 40,000 ಸಾವಿರ ರೂ. ಸಂಚಿತ ವೇತನವನ್ನು ಹಾಗೂ ನಿಗದಿಪಡಿಸಿ ಹೊರಗುತ್ತಿಗೆ ಆಧಾರದ ಮೇಲೆ ಷರತ್ತುಗಳನ್ವಯ ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ.

ಅರ್ಹ ಮತ್ತು ಇಚ್ಛೆಯುಳ್ಳ ನಿವೃತ್ತ ಜಿಲ್ಲಾ ನ್ಯಾಯಧೀಶರು ಅಥವಾ ನಿವೃತ್ತ ಹಿರಿಯ ಸಿವಿಲ್ ನ್ಯಾಯಾಧೀಶರು, ನಿವೃತ್ತ ಕಂದಾಯ ಇಲಾಖೆಯ ಅಧಿಕಾರಿ (ನಿವೃತ್ತ ವಿಶೇಷ ಜಿಲ್ಲಾಧಿಕಾರಿ) ನಿವೃತ್ತ ಕಂದಾಯ ಇಲಾಖೆ ನಿವೃತ್ತ ತಹಶೀಲ್ದಾರ್, ಉಪತಹಶೀಲ್ದಾರರು ಅರ್ಜಿಯನ್ನು ಜನವರಿ 2ರೊಳಗಾಗಿ ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬಹುದಾಗಿದೆ. ಈ ನೇಮಕಾತಿಯು ನೇಮಕಾತಿ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಉರ್ಜಿತವಾಗಿರುತ್ತದೆ.

ಕಾನೂನು ಸಲಹೆಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನ್ಯಾಯಾಧೀಶರು ಜಿಲ್ಲಾ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿರಬೇಕು. ಈ ಹುದ್ದೆಯು ಕರ್ತವ್ಯಕ್ಕೆ ಹಾಜರಾದ ದಿನದಿಂದ ಒಂದು ವರ್ಷ ಅಥವಾ ಸರ್ಕಾರದ ಆದೇಶ ಹೊರಡಿಸುವವರೆಗೆ ಇದರಲ್ಲಿ ಯಾವುದೋ ಮೊದಲು **(2ನೇಪುಟಕ್ಕೆ)**

## ಮೊದಲನೇಯ ಪುಟದಿಂದ

# ದ್ವೇಷ ಭಾಷಣ: ಗದ್ದಲ, ಕೋಲಾಹಲ

ಸಫಲವಾಯಿತು.

ಇದಕ್ಕೂಮೊದಲು ಗೃಹ ಸಚಿವ ಡಾ.ಜಿ. ಪರಮೇಶ್ವರ್, ಕರ್ನಾಟಕ ದ್ವೇಷ ಬಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ಕಾಯ್ದೆಯನ್ನು ಪರ್ಯಾಲೋಚಿಸಿ ಅಂಗೀಕಾರ ನೀಡುವಂತೆ ಸದನವನ್ನು ಕೋರಿ ವಿಧೇಯಕದಲ್ಲಿನ ಆಂಶಗಳನ್ನು ಎಳೆ ಎಳೆಯಾಗಿ ಸದನದ ಮುಂದಿಟ್ಟು, ಈ ಕಾಯ್ದೆ ಅವಶ್ಯಕತೆಯನ್ನು ಪ್ರತಿಪಾದಿಸಿದರು.

ಆಗ ಪ್ರತಿಪಕ್ಷ ನಾಯಕ ಆರ್. ಅಶೋಕ್, ಈ ಕಾಯ್ದೆಯ ಅಗತ್ಯವಿಲ್ಲ. ಇದು ರಾಜಕೀಯ ದ್ವೇಷ ತೀರಿಸಿಕೊಳ್ಳಲು ತಂದಿರುವ ಕಾಯ್ದೆ. ಈ ಕಾಯ್ದೆ ಜಾರಿಯಿಂದ ಪೊಲೀಸರು, ಹಿಟ್ಲರ್‌ಗಳಾಗುತ್ತಾರೆ. ಈ ಕಾಯ್ದೆ ಅಭಿವ್ಯಕ್ತಿ ಮತ್ತು ಪತ್ರಿಕಾ ಸ್ವಾತಂತ್ರಕ್ಕೆ ವಿರುದ್ಧವಾಗಿದೆ. ಈ ಕಾಯ್ದೆ ಅಗತ್ಯವಿಲ್ಲ ಎಂದು ಹೇಳಿ, ವಿರೋಧ ಪಕ್ಷಗಳನ್ನು ಮುಗಿಸಲು ಈ ಕಾಯ್ದೆಯನ್ನು ತರಲಾಗಿದೆ ವೋಟ್ ಬ್ಯಾಂಕ್ ರಾಜಕೀಯಕ್ಕಾಗಿ ಕಾಂಗ್ರೆಸ್ ಈ ಕಾಯ್ದೆ ತಂದಿದೆ. ಇದಕ್ಕೆ ನಮ್ಮ ವಿರೋಧ ಇದೆ. ಹೀಗಾಗಿ ಬಿಎನ್‌ಎಸ್‌ನಲ್ಲಿ ಹಲವು ಕಾನೂನುಗಳಿವೆ. ಹೀಗಿರುವಾಗ ಮತ್ತೆ ದ್ವೇಷ ಭಾಷಣ ಮತ್ತು ದ್ವೇಷ ರಾಜಕೀಯ ನಿರ್ಬಂಧಿಸಲು ಕಾನೂನು ಅಗತ್ಯವಿಲ್ಲ. ಪತ್ರಿಕಾರಂಗ ಮತ್ತು ವಿರೋಧ ಪಕ್ಷಗಳನ್ನು ಗುರಿಯಾಗಿಸಿ ಈ ಕಾಯ್ದೆ ತರಲಾಗಿದೆ ಎಂದು ಟೀಕಿಸಿದರು.

ಅಧಿಕಾರದಲ್ಲಿರುವವರಿಗೆ ಈ ಕಾಯ್ದೆ ಒಂದು ಆಯುಧವಾಗಲಿದೆ. ಹೀಗಿರುವ ಕಾನೂನೇ ಸಾಕು. ಈ ಕಾನೂನು ಬೇಡ. ಪೊಲೀಸರಿಗೆ ಹಣ ವಸೂಲಿ ಮಾಡಲು, ಹಿಟ್ಲರ್‌ನಂತೆ ವರ್ತಿಸಲು ಇದು ನೆರವಾಗುತ್ತದೆ ಎಂದು ಹೇಳಿದರು

ನೂರು ಸಾರಿ ಯೋಚನೆ ಮಾಡಿ ಈ ಕಾಯ್ದೆ ತರುವುದು ಬೇಡವೆ ಬೇಡ. ಈ ಕಾಯ್ದೆಯಡಿ ಯಾರನ್ನು ಹೇಗೆ ಬೇಕಾದರು ಬಂಧಿಸಬಹುದು. ಇದಕ್ಕೆ ಹೊಸ ಜೈಲು ಬೇಕಾಗುತ್ತದೆ ಎಂದರು.

ಈ ಹಂತದಲ್ಲಿ ಸಚಿವ ಬೈರತಿ ಸುರೇಶ್ ಎದ್ದು ನಿಂತು, ಕರಾವಳಿ ಬಗ್ಗೆ ಆಡಿದ ಮಾತು ವಿಪಕ್ಷ ಸದಸ್ಯರನ್ನು ಕೆರಳಿಸಿ ವಿಪಕ್ಷ ಸದಸ್ಯರು ಸಚಿವ ಬೈರತಿಸುರೇಶ್ ಜತೆ ಜಟಾಪಟಿಗೆ ಇಳಿದರು. ಒಂದು ಹಂತದಲ್ಲಿ ಸುರೇಶ್ ಹಾಗೂ ಬಿಜೆಪಿ ಚನ್ನಬಸಪ್ಪ ನಡುವೆ ಏಕವಚನದಲ್ಲೇ ಮಾತುಗಳ ವಿನಿಮಯವೂ ಆಗಿ ಸದನದಲ್ಲಿ ಗದ್ದಲದ ವಾತಾವರಣ ರೂಪುಗೊಂಡಿತ್ತು.

ಕರಾವಳಿ ಬಗ್ಗೆ ಸಚಿವ ಸುರೇಶ್ ಆಡಿದ ಮಾತು ವಿರೋಧಿಸಿ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಮುಂದಿನ ಪೀಠಕ್ಕೆ ಆಗಮಿಸಿ ಧರಣಿ ಆರಂಭಿಸುತ್ತಿದೆ. ವಿಧೇಯಕವನ್ನು ಮತಕ್ಕೆ ಹಾಕುವಾಗ ಹೇಳಿ ವಿಧೇಯಕವನ್ನು ಮತಕ್ಕೆ ಹಾಕಿ ಧ್ವನಿ ಮತದಿಂದ ಅಂಗೀಕಾರವಾಗಿದೇ ಎಂದು ಎಂದು ಪ್ರಕಟಿಸಿ ಸದನವನ್ನು ಭೋಜನ ವಿರಾಮಕ್ಕೆ ಮುಂದೂಡಿದರು.

ಸಭಾಧ್ಯಕ್ಷರು ಸದನವನ್ನು ಮಂದೂಡಿದರು ವಿಪಕ್ಷ ಸದಸ್ಯರು ಮಾತ್ರ ಸದನದಲ್ಲೇ ತಮ್ಮ ಆಕ್ರೋಶವನ್ನು ಹೊರ ಹಾಕುತ್ತಾ ನಿಂತಿದ್ದರು. ಈ ರೀತಿ ವಿಧೇಯಕ ಅಂಗೀಕಾರ ಮಾಡಿದ್ದು ಸರಿಯಲ್ಲ ಎಂಬ ಘೋಷಣೆಗಳನ್ನು ಕೂಗಿದರು.

# ಪಲ್ಸ್ ಪೋಲಿಯೋ ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕು

ಯಾವೊಂದು ಮಗು ಕೂಡ ಪೋಲಿಯೋ ಲಸಿಕೆಯಿಂದ ವಂಚಿವಾಗದಂತೆ ಅಗತ್ಯ ಸಿದ್ದೆತೆಗಳನ್ನು ಕೈಗೊಳ್ಳಲಾಗಿದೆ ಗ್ರಾಮೀಣ ಭಾಗದಲ್ಲಿನ ಜನರಿಗೆ ಜಾಗೃತಿ ಮೂಡಿಸುವುದಕ್ಕಾಗಿ ಶಿಕ್ಷಣ ಇಲಾಖೆಯ ಸಹಕಾರದಿಂದ ವಿದ್ಯಾರ್ಥಿಗಳಿಂದ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಗ್ರೇಡ್2 ತಹಸೀಲ್ದಾರ ಅಬ್ದುಲ್ ವಾಹಿದ್ ಮಾತನಾಡಿ ಮಾನ್ವಿ ತಾಲೂಕಿನಾದ್ಯಂತ ನಡೆಯುವ ಪಲ್ಸ್ ಪೋಲಿಯೊ-2025 ಅಭಿಯಾನದ ಯಶಸ್ಸಿಗೆ ತಾಲೂಕಿನ ಎಲ್ಲಾ ಇಲಾಖೆಗಳ ಅಧಿಕಾರಿಗಳು ಆರೋಗ್ಯ ಇಲಾಖೆಗೆ ಅಗತ್ಯ ಸಹಕಾರ ನೀಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಪಟ್ಟಣದಲ್ಲಿ ಪುರಸಭೆ ಅಧಿಕಾರಿಗಳು, ಗ್ರಾಮೀಣ ಭಾಗದಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಅಗತ್ಯ ಸಹಕಾರ ನೀಡುವ ಮೂಲಕ ತಾಲೂಕನ್ನು ಪೋಲಿಯೊ ಮುಕ್ತಗೊಳಿಸೋಣ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ.ಚಂದ್ರಶೇಖರ ಸ್ವಾಮಿ ಮಾತನಾಡಿದರು.ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ , ತಾಲೂಕು ಪಂಚಾಯಿತಿ ಉ.ಖಾ.ಸಹಾಯಕ ನಿರ್ದೇಶಕರಾದ ದೀಪಾ ಅರಳಿ ಕಟ್ಟಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭಾಗವಹಿಸಿದರು.

# ಹಿರಿತನದ ಅಧಾರದ ಮೇಲೆ ಹುದ್ದೆಗೆ ನೇಮಕ ಮಾಡಿ: ಕೆ.ಎಸ್.ನಾಡಗೌಡ

ಆಗುತ್ತಾರೆ ಎಂದು ಅವರು ಹೇಳಿದರು.25-09-2025 ರಂದು ಶರಣಬಸವ ಇವರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನಾಗಿ ನೇಮಿಸುವಂತೆ ಸರ್ವನುಮತಿಯಿಂದ ತೀರ್ಮಾನ ಕೈಗೊಂಡರು ವೃತ್ತ ವೀಕ್ಷಕರು ಸಭೆಯ ನಡುವಳಿಕೆ ಪುಸ್ತಕದಲ್ಲಿ ಬರೆಯದೆ ಸಭೆಯಿಂದ ಪಲಾಯನ ಮಾಡಿದರು. ಹೀಗೆ ಉದ್ದೇಶ ಪೂರ್ವಕವಾಗಿ ಯಾವುದೇ ಒತ್ತಡಕ್ಕೆ ಮಣಿದು ಕಾನೂನು ಬಾಹಿರವಾಗಿ ಆದೇಶ ಮಾಡಿದ್ದಾರೆ. ಅವರ ಅವ್ಯವಹಾರಗಳು ರುಜುವಾಗಿದ್ದು, ಅಡಿಟ್ ವರದಿಯಲ್ಲಿ ಹಣ ಕಟ್ಟುವಂತೆ ಆದೇಶವಾಗಿದೆ. ಅವರನ್ನು ರಕ್ಷಿಸಲು ಯಾವುದೇ ಅನುಭವ ಇಲ್ಲದವರಿಗೆ ಆದೇಶ ನೀಡಿದ್ದಾರೆ. ತಕ್ಷಣ ಈ ಆದೇಶ ಹಿಂಪಡೆದು ಸೇವಾ ಹಿರಿತನದ ಅದರದ ಮೇಲೆ ಶರಣಬಸವನಿಗೆ ಆದೇಶ ನೀಡಬೇಕು. ಇಲ್ಲದಿದ್ದರೆ ತಮ್ಮ ಕಾನೂನುಬಾಹಿರ ನಿರ್ಧಾರದ ವಿರುದ್ಧ ಹೋರಾಟ ಮಾಡಲಾಗುವುದು. ಅಲ್ಲದೆ ಕಾನೂನು ಹೋರಾಟಕ್ಕಾಗಿ ನ್ಯಾಯಲಯದಲ್ಲಿ ಹೋರಾಟ ಮಾಡಲಾಗುವುದು ತಾವು ಅದಕ್ಕೆ ಅವಕಾಶ ನೀಡದೆ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ನಿರ್ದೇಶಕರಾದ ಬಸನಗೌಡ ಸಿದ್ನಕಲ್, ಚನ್ನಮ್ಮ ಇರಗಂಡ, ಯಕಂಪ್ಪ ಯರಕಮಟ್ಟಿ, ಡಿಎಸ್.ಎಸ್. ಸಂಘಟನೆಯ ಮುಖಂಡರಾದ ಎನ್.ಲಿಂಗಪ್ಪ, ಅಮರೇಶ ಚಲವಾಧಿ, ರಾಚಪ್ಪ ಸೌದ್ರಿ, ಸಾಬಣ್ಣ ರಾಂಪಳಿ, ಶಿವಣ್ಣ ಹಂಪರಗುಂದಿ, ಬಸವರಾಜ ಅಯ್ಯಾಳ, ಬಸವರಾಜ ದೊಡ್ಡಳಿ, ರಂಗಪ್ಪ ಜಂಪಿ ಸೇರಿದಂತೆ ಇತರರು ಇದ್ದರು.

# ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕಾನೂನು ಸಲಹೆಗಾರರ ನೇಮಕಕ್ಕೆ ಅರ್ಜಿ ಆಹ್ವಾನ

ಅಲ್ಲಿಯವರೆಗೆ ತಾತ್ಕಾಲಿಕ ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ. ನೇಮಕಾತಿ, ಹಾಲಿ ಕಾರ್ಯನಿರ್ವಹಿಸುತ್ತಿರುವ ಸೇವೆಯು ದಿನದ ಪೂರ್ಣಾವಧಿಯಾಗಿದ್ದು, ಯಾವುದೇ ರೀತಿಯ ಸರ್ಕಾರದ ವಿರುದ್ಧ ಯಾವುದೇ ಪ್ರಕರಣಗಳಲ್ಲಿ ವಕಾಲತ್ತು ವಹಿಸತಕ್ಕದ್ದಲ್ಲ. ಬೇರೆ ಕಂಪನಿ ಇತ್ಯಾದಿಗಳಲ್ಲಿ ಒಪ್ಪಂದ ಮಾಡಿಕೊಂಡು ಕಾರ್ಯನಿರ್ವಹಿಸತಕ್ಕದ್ದಲ್ಲ. ಎಲ್ಲಾ ಪ್ರಕರಣಗಳ ಗೌಪ್ಯತೆ ಕಾಪಾಡಬೇಕು.

ಕಾನೂನು ಸಲಹೆಗಾರರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲು ನಿವೃತ್ತ ಕಂದಾಯ ಇಲಾಖೆ ಅಧಿಕಾರಿ, ನೌಕರರು ಕಾನೂನು ಪದವೀಧರರಾಗಿರಬೇಕು. ಹಾಗೂ 7 ವರ್ಷಗಳ ಸೇವಾ ಅನುಭವ ಹೊಂದಿರಬೇಕು. ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ಹಾಗೂ ನಿವೃತ್ತ ಕಂದಾಯ ಇಲಾಖೆ ಅಧಿಕಾರಿ, ನೌಕರರಿಗೆ ಕಂದಾಯ ನಿಯಮಗಳ ಬಗ್ಗೆ ಅಡಳಿತ, ಇಲಾಖಾ ವಿಚಾರಣೆ ಕುರಿತಂತೆ ಅರಿವು ಹೊಂದಿರಬೇಕು. ಭೂಸ್ವಾಧೀನ ಪ್ರಕರಣಗಳು, ಸ್ವಾಧೀನ ಪೂರ್ವ ಕಬ್ಜೆ, ಸರ್ಕಾರಿ ಜಮೀನು ರಕ್ಷಣೆ, ತೆರಿಗೆ ಹಣ ಪೋಲಾಗದಂತೆ ತಡೆ, ಇತರೆ ವಿಷಯಗಳ ಕುರಿತಂತ ಪ್ರಕರಣಗಳನ್ನು ವ್ಯವಹರಿಸಿದ ಬಗೆ, ಅನುಭವ ಹೊಂದಿರಬೇಕು.

ನ್ಯಾಯಾಲಯ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡಲು ವ್ಯಾಜ್ಯಗಳನ್ನು ನಡೆಸಲು ಸರ್ಕಾರದ ಪರವಾಗಿ ಆಕ್ಷೇವಣೆ ಸಲ್ಲಿಸುವುದು ದಾಖಲೆಗಳನ್ನು ಪರಿಶೀಲಿಸುವುದು. ಕಂದಾಯ ಇಲಾಖೆಗೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮ ಕಾಲ ಕಾಲಕ್ಕೆ ಪುನರಾವಲೋಕನ ಮಾಡಿಕೊಳ್ಳತಕ್ಕದ್ದು. ಕಾನೂನು ಸಲಹೆಗಾರರು ಎಲ್ಲಾ ಪ್ರಕರಣಗಳ ವಿಚಾರಣಾ ಮತ್ತು ಆಕ್ಷೇವಣಾ ಹೇಳಿಕೆ ಹಾಗೂ ಅಫಿಡವಿಟ್ ಇನ್ನಿತರ ವಿವರಗಳನ್ನು ತಮ್ಮ ರಿಜಿಸ್ಟರ್ ಗಳಲ್ಲಿ ನಮೂದು ಮಾಡಿ ಇಟ್ಟುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ನೂತನ ಜಿಲ್ಲಾಧಿಕಾರಿಗಳ ಕಚೇರಿಯನ್ನು ಕಚೇರಿಯ ವೇಳೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**

**9743497111, 9743496111**

# ಅಮರಶಿಲ್ಪಿ ಜಕಣಾಚಾರಿ ದಿನಾಚರಣೆ: ಪೂರ್ವಭಾವಿ ಸಿದ್ಧತಾ ಸಭೆ



ಯುವಮಾರ್ಗ ಸುದ್ದಿ

**ರಾಯಚೂರು,ಡಿ.18–** ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯು ಅರ್ಥಪೂರ್ಣವಾಗಿ ನಡೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿ ಗಳಿಗೆ ನಿರ್ದೇಶನ ನೀಡಿದರು.

ಡಿಸೆಂಬರ್ 17ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ 2026ರ ಜನವರಿ 3ರ ಬೆಳಗ್ಗೆ 11:30ಕ್ಕೆ ದಿನಾಚರಣೆ ನಿಗದಿಯಾಗಿದೆ. ಅಂದು 9 ಗಂಟೆಗೆ ನಗರದ ಬೇರೂನ್ ಕಿಲ್ಲಾದ ಶ್ರೀಕಾಳಿಕಾದೇವಿ ದೇವಸ್ಥಾನದಿಂದ ರಂಗಮಂದಿರದ ವರೆಗೂ ಮೆರವಣಿಗೆ ನಡೆಯಲಿದೆ.

ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಯಬೇಕು. ಕಾರ್ಯಕ್ರಮದ ಸ್ಥಳದಲ್ಲಿ ಸ್ವಚ್ಛತೆ, ತಳಿರು ತೋರಣ, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಅವರು ಸೂಚನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ, ಈರಣ್ಣ ಬಡಿಗೇರ, ಸಮಾಜದ ಮುಖಂಡರಾದ ಬ್ರಹ್ಮ ಗಣೇಶ್ ವಕೀಲರು, ಕೆ.ರಾಮು ಗಾಣಧಾಳ, ಗಿರೀಶ್ ಆಚಾರಿ, ಡಾ.ವೆಂಕಟೇಶ್ ಅನ್ವರಿ, ಹಿರಿಯ ಪತ್ರಕರ್ತರಾದ ಮಾರುತಿ ಬಡಿಗೇರ, ಬ್ರಹ್ಮಯ್ಯ, ನಾಗರಾಜ ಪತ್ತಾರ, ಕೆ.ನರಸಪ್ಪ, ರಾಮುಲು, ಸುರೇಶ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಸಭೆಯಲ್ಲಿ ಇದ್ದರು.

# ಇಂದಿನಿಂದ ಬಿ.ಗಣೇಕಲ್ ಶ್ರೀಮಾರುತೇಶ್ವರ ಜಾತ್ರಾ ಮಹೋತ್ಸವ

ಯುವಮಾರ್ಗ ಸುದ್ದಿ



**ಅರಕೇರಾ,ಡಿ.18–**ತಾಲೂಕಿನ ಬಿ.ಗಣೇಕಲ್ ಗ್ರಾಮದ ಭಕ್ತರ ಆರಾಧ್ಯ ದೈವ ಶ್ರೀ ಮಾರುತೇಶ್ವರ ಜಾತ್ರಾ ಮಹೋತ್ಸವ ಡಿ.19 ರಿಂದ ಡಿ. 24 ರವರೆಗೆ ಜರುಗಲಿದೆ.

ಡಿ.19 ರಂದು ಬೆಳಿಗ್ಗೆ 05:30ಕ್ಕೆ ಅರ್ಚಕರಿಂದ ವಿಶೇಷ ಪೂಜೆ, ರಾತ್ರಿ 8:30 ರಿಂದ ಪಲ್ಲಕ್ಕಿ ಮೆರವಣಿಗೆ ಜೊತೆಗೆ ಗಂಗಾಸ್ಥಳಕ್ಕೆ ಹೋಗುವ ಕಾರ್ಯಕ್ರಮ ನಂತರ 10:00 ರಿಂದ ಊರಗೌಡರ ಮನೆತನದಿಂದ ಜ್ಯೋತಿ ಸೇವೆ ಮತ್ತು ಮುದುಕಣ್ಣ ತಾತನವರಿಂದ ಶ್ರೀಮಾರುತೇಶ್ವರ ಹೇಳಿಕೆ (ಕಾಣೀರ್ಕ) ಕಾರ್ಯಕ್ರಮ ಜರುಗಲಿದೆ. ಹೀಗೆ ಡಿ. 22 ರವರೆಗೆ ವತ್ತನದಾರರ ಮನೆತನದಿಂದ ಹಾಗೂ ವಿವಿಧ ಜನಾಂಗದ ಮನೆತನದಿಂದ ಜ್ಯೋತಿ ಸೇವೆ ಕಾರ್ಯಕ್ರಮ ಇರುತ್ತದೆ. ಡಿ.22 ರಂದು ಉಚ್ಚಾಯ ಉತ್ಸವ ಜರುಗಲಿದೆ.

ಡಿ.23 ರಂದು ಬೆಳಿಗ್ಗೆ 10:00 ರಿಂದ 3:00 ಗಂಟೆಯವರೆಗೆ ಸಮಸ್ತ ಜನಾಂಗದ ವತಿಯಿಂದ ದೈವಪೂಜೆ, ದೀರ್ಘದಂಡ ನಮಸ್ಕಾರ ಹಾಗೂ ಜ್ಯೋತಿ ಸೇವೆ ಕಾರ್ಯಕ್ರಮ ನಂತರ ರಾತ್ರಿ 9:30 ಕ್ಕೆ ಶ್ರೀ ಮಾರುತೇಶ್ವರ ಮಹಾರಥೋತ್ಸವ ಜರುಗಲಿದೆ. 10:00 ಕ್ಕೆ ಗ್ರಾಮದ ಕಲಾವಿದರಿಂದ ಬಯಲಾಟ ಪ್ರದರ್ಶನ ಇರುತ್ತದೆ. ಡಿ.24 ರಂದು ಮಧ್ಯಾಹ್ನ 2:00 ಗಂಟೆಗೆ ಹಾಲುಗಂಭ ಸ್ಪರ್ಧೆ ನಡೆಯಲಿದೆ ಈ ಸ್ಪರ್ಧೆಯಲ್ಲಿ ವಿಜಯಶಾಲಿಯಾದವರಿಗೆ ಬಹುಮಾನ ನೀಡಿ ಗೌರವಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ವಾಸವಿ ಮಹಿಳಾ ಸಂಘದ ವತಿಯಿಂದ ವರಹ ಶ್ರೀದೇವಿ ಸಾಮೂಹಿಕ ಪೂಜಾ ಕಾರ್ಯಕ್ರಮ



ಯುವಮಾರ್ಗ ಸುದ್ದಿ

**ಮಾನ್ವಿ,ಡಿ.18–**ಪಟ್ಟಣದ ಶ್ರೀ ನಗರೇಶ್ವರ ದೇವಸ್ಥಾನದ ಆವರಣದಲ್ಲಿನ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಶ್ರೀ ವಾಸವಿ ಮಹಿಳಾ ಸಂಘದ ವತಿಯಿಂದ ನಡೆದ ವರಹ ಶ್ರೀದೇವಿ ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ ಶ್ರೀ ನಗರೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ದ್ವಾರಕನಾಥ ಭಟ್ ಉಪನ್ಯಾಸ ನೀಡಿ ಶ್ರೀಭಗವಾನ್ ಶ್ರೀ ವಿಷ್ಣುವಿನ ದಶವತಾರಗಳಲ್ಲಿ ಒಂದಾದ ವರಹ ಅವತಾರದಲ್ಲಿ ಭಗವಂತನನ್ನು ಶ್ರೀದೇವಿಯ ಜೋತೆಗೆ ಸುಮಂಗಲಿಯರು ಪೂಜಿಸುವುದರಿಂದ ಉತ್ತಮ ಫಲಗಳು ದೊರೆಂಯುತ್ತವೆ ಎಂದು ತಿಳಿಸಿದರು.

ನೂರಾರು ಮಹಿಳೆಯರು ಸಾಮೂಹಿಕವಾಗಿ ಭಕ್ತಿ ಶ್ರದ್ದೆಗಳಿಂದ ಪೂಜಿಸಿದರು. ವರಹ ಶ್ರೀದೇವಿ ಮೂರ್ತಿಗಳಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದ ತಾಲೂಕು ಅಧ್ಯಕ್ಷರಾದ ಆರ್ ಮುತ್ತುರಾಜ್ ಶೆಟ್ಟಿ, ಬಿ,ಈರಣ್ಣ ಶೆಟ್ಟಿ ,ನಯೋಪ್ರ ಸದಸ್ಯರಾದ ಎಂ. ಯಂಕಯ್ಯಶೆಟ್ಟಿ , ಸತ್ಯನಾರಾಯಣ ಶೆಟ್ಟಿ. ಈ.ರಾಮಾಂಜನೇಯ್ಯ ಶೆಟ್ಟಿ, ವಾಸವಿ ಯುವಜನ ಸಂಘದ ಅಧ್ಯಕ್ಷರಾದ ಇ.ಬಸವರಾಜ ಶೆಟ್ಟಿ , ಶ್ರೀ ವಾಸವಿ ಮಹಿಳಾ ಸಂಘದ ತಾ.ಅಧ್ಯಕ್ಷರಾದ ಶ್ರೀ ಲಕ್ಷ್ಮಿ ??ೀ ರಾಮಾಂಜನೇಯ್ಯಶೆಟ್ಟಿ,ಬಿ,ರಾಧ ರಾಘವೇಂದ್ರ ಶೆಟ್ಟಿ ಕಾರ್ಯದರ್ಶಿ,ಎಂ. ಶೋಭ ಯಂಕಯ್ಯ ಶೆಟ್ಟಿ ಸೇರಿದಂತೆ ನೂರಾರು ಮಹಿಳೆಯರು ಭಾಗವಹಿಸಿದರು.

# ಜೂಜಾಟ: 8 ಮಂದಿ ಬಂಧನ

**ಕಲಬುರಗಿ,ಡಿ.18–**ನಗರದ ಮೌಲಾಲಿ ಕಟ್ಟಾ ಆಲಂಪೀರ ದರ್ಗಾ ಹತ್ತಿರವಿರುವ ಖುಲ್ಲಾ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಆರ್.ಜಿ.ನಗರ ಪೊಲೀಸ್ ಠಾಣೆ ಪಿಐ ಎ.ವಾಜೀದ್ ಪಟೇಲ್, ಸಿಬ್ಬಂದಿಗಳಾದ ಮಲ್ಲಣ್ಣಗೌಡ, ಶರಣಬಸವ, ಸಂತೋಷ ಅವರು ದಾಳಿ ನಡೆಸಿ 8 ಜನರನ್ನು ಬಂಧಿಸಿದ್ದಾರೆ.

ಮತೀನ್, ಮಹ್ಮದ್ ಮುಸ್ತಾಫಾ, ಅಯ್ಯಪ್ಪ ಪೂಜಾರಿ, ಉದಯಕುಮಾರ ಚವ್ಹಾಣ್, ಪ್ರಕಾಶ ಸಿಂಧೆ, ಮಹ್ಮದ್ ಜಾಫರ್, ಖಾಜಾಪಾಷಾ, ಗುಡುಲಾಲ್ ಎಂಬುವವರನ್ನು ಬಂಧಿಸಿ 8,150 ರೂ.ನಗದು, 52 ಇಸ್ಪೀಟ್ ಎಲೆಗಳನ್ನು ಜಪ್ತಿ ಮಾಡಿದ್ದಾರೆ. ಆರ್.ಜಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯುವ ಮಾರ್ಗ www.yuvamarga.com Yuva Marga yuva_marga_

# ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಬಿಜೆಪಿಯಿಂದಲೇ ಕೊಕ್ಕೆ: ಡಾ.ಅಜಯ್ ಸಿಂಗ್



**ಕಲಬುರಗಿ,ಡಿ.18**–ಸುವರ್ಣ ವಿಧಾನ ಸೌಧದಲ್ಲಿ ಆರಂಭವಾಗಿ ರುವ ಉತ್ತರ ಕರ್ನಾಟಕ ಅಭಿವೃದ್ಧಿ ವಿಷಯಗಳನ್ನು ಮುಂದಿಟ್ಟುಕೊಂಡು ಸಾಗಿರುವ ಮಹತ್ವದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿರುವ ಕೆಕೆಆರ್‌ಡಿಬಿ ಅಧ್ಯಕ್ಷರು, ಜೇವರ್ಗಿ ಶಾಸಕರಾಗಿರುವ ಡಾ.ಅಜಯ್ ಧರ್ಮಸಿಂಗ್ ಅವರು ಕಳೆದ 2 ದಶಕದಲ್ಲಿ ಕಲ್ಯಾಣ ನಾಡು ಸೇರಿದಂತೆ ಇಡಿಯಾಗಿ ಉ-ಕ ಪ್ರಗತಿಗೆ ಕಾಂಗ್ರೆಸ್ ಸರ್ಕಾರದ ಕೊಡುಗೆಗಳನ್ನು ಒಂದೊಂದಾಗಿ ಪಟ್ಟಿ ಮಾಡುತ್ತ ವಪಕ್ಷ ಬಿಜೆಪಿಯವರ ಆರೋಪಗಳಿಗೆ ಮಾರುತ್ತರ ನೀಡಿದರು.

ಕಳೆದ 20 ವರ್ಷಗಳಲ್ಲಿ ಬಿಜೆಪಿಯವರೇ 11 ವರ್ಷ ಅಧಿಕಾರ ಮಾಡಿದ್ದರೂ ಕಲ್ಯಾಣ ನಾಡಿನ ಪ್ರಗತಿಗೆ ಮಂಕು ಕವಿದಿದೆ. ಕಲಂ 371 (ಜೆ) ಯಂತತಹ ಕಲ್ಯಾಣ ನಾಡಿನ ಪ್ರಗತಿಯಲ್ಲಿ ತನ್ನದೇ ಪರಿಣಾಮ ಬೀರುತ್ತಿರುವ ಸಂವಿಧಾನದ ವಿಶೇಷ ಸಂರಕ್ಷಣೆಯ ವಿಷಯಗಳನ್ನೆಲ್ಲ ಬಿಜೆಪಿ ಜಾರಿಗೆ ತಾರದೆ ವಂಚಿಸಿತ್ತು. ದಿ. ಕೃಷ್ಣ ಸರ್ಕಾರದಲ್ಲಿ ಕೇಂದ್ರದ ಮುಂದೆ ಕಲಂ 371 (ಜೆ)ಗಾಗಿ ಆಗ್ರಹ ಕೇಳಿ ಬಂದಾಗ ಅದನ್ನು ಬಿಜೆಪಿ ನೇತೃದ ಎನ್‌ಡಿಎ ಆಡಳಿತ ನಿರಾರಿಸಿತ್ತು. ಇದು ಕಲ್ಯಾಣ ನಾಡಿನ ಪ್ರಗತಿಗೆ ಮಾಡಿರುವ ಮಹಾ ಮೋಸವೆಂದು ಡಾ. ಅಜಯ್ ಸಿಂಗ್ ವಿಪಕ್ಷಗಳನ್ನು ಛೇಡಿಸಿದರು.

ಕಲಂ 371 (ಜೆ) ಅನುಷ್ಠಾನದ ನಂರ ಲ್ಯಾಣ ನಾಡು ಸೇರಿದಂತೆ ಉತ್ತರ ಭಾಗಕ್ಕೆ 24, 875 ಕೋಟಿ ರು ಅಭಿವೃದ್ಧಿ ಅನುದಾನ ಬಂದಿದೆ. ಇದೇ ಕಲಂ 2 ದಶಗಳ ಹಿಂದೆಯೇ ಜಾರಿಗೊಂಡಿದ್ದರೆ 45 ಸಾವಿರ ಕೋಟಿ ರು ಗೂ ಅಧಿಕ ಅನುದಾನ ಬರುತ್ತಿತ್ತು. ಅಭಿವೃದ್ಧಿಗೆ ಗ್ರಹಣ ಅಮರಲು ಯಾರು ಕಾರಣ? ಬಿಜೆಪಿಯೇ ತಾನೆ ಎಂದು ಗುಡುಗಿದರು.

ಕೆಕೆಆರ್‌ಡಿಬಿಗೆ ಕಾಂಗ್ರೆಸ್ ಸರ್ಕಾರದ 5 ಸಾವಿರ ಕೋಟಿ ರು ಅನುದಾನ ನೀಡುತ್ತಿದೆ. ಕಳೆದ 3 ವರ್ಷಗಳಲ್ಲಿ 13 ಸಾವಿರ ಕಟಿ ರು ಅನುದಾನ ಬಂದಿದೆ. ಇದರಿಂದ ಆರೋಗ್ಯ, ಅಕ್ಷರ, ಅರಣ್ಯ, ಕೃಷಿ ಇತ್ಯಾದಿ ರಂಗಗಳಲ್ಲಿ ಕ್ರಾಂತಿಯಾಗುತ್ತಿದೆ. ಆರೋಗ್ಯ ಆವಿಷ್ಕಾರದಲ್ಲಿ 415 ಕೋಟಿ ರು ವೆಚ್ಚದಲ್ಲಿ ಎಲ್ಲಾ ಹಂತದಲ್ಲಿ ಆಸ್ಪತ್ರೆಗಳ ಮೇಲ್ದರ್ಜೆ ಸಾಗಿದೆ. ಸೂಪರ್ ಸ್ಪೇಶ್ಯಾಲಿಟಿ ಆಸ್ಪತ್ರೆಗಳು ಬರುತ್ತಿವೆ. ಅಭಿವೃದ್ಧಿ ಒಂದೇ ರಾತ್ರಿ ಆಗೋದಲ್ಲ, ನಮ್ಮ ಭೂಭಾಗ ಐತಿಹಾಸಿಕವಾಗಿ ಹಿಂದಿದೆ, ಇಲ್ಲಿ ಪ್ರಗತಿಯ ಫಸಲು ಚಿಗುರಿಸಲು ಕಾಂಗ್ರೆಸ್ ಪ್ರಮಾಣಿಕ ಯತ್ನ ಮಾಡುತ್ತಿದೆ ಎಂದು ಡಾ. ಅಜಯ್ ಸಿಂಗ್ ಅಂಕಿ ಸಂಖ್ಯೆ ಸಮೇತ ಸದನದಲ್ಲಿ ಉ- ಕ, ಕಲ್ಯಾಣ ನಾಡಿನ ಪ್ರಗತಿಗೆ ಕಾಂಗ್ರೆಸ್‌ನ ಬದ್ಧತೆಯನ್ನು ವಿವರಿಸಿದರು.

ಕಲ್ಯಾಣ ನಾಡು ಸೇರಿದಂತೆ ರಾಜ್ಯದಿಂದ ಜನತೆ ಬಿಜೆಪಿಯ ಸಂಸದರು ಹೆಚ್ಚಿಗೆ ಕೇಂದ್ರಕ್ಕೆ ಕಳುಹಿಸಿದರೂ ಇಲ್ಲಿಂದ ರಾಜ್ಯದ ಪಾಲಿನ ರೂಪದಲ್ಲಿ ಬರಬೇಕಾದಂತಹ ತೆರಿಗೆ ಬರುತ್ತಿಲಲ. ಈ ಸಂಸದರು ಕೇಂದ್ರಕ್ಕೆ ಹೋದರೂ ಲಾಭ ಶೂನ್ಯ. ಆದರೆ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಗೆ ಹಿಂದುಳಿದ ಪ್ರದೇಶದಲ್ಲಿ ತನ್ನ ಕಾಳಜಿ, ಬದ್ಧತೆ ಸದಾಕಾಲ ಮೆರೆಯುತ್ತಿದೆ ಎಂದರು.

# ವಿಶ್ವಗುರು ಬಸವಣ್ಣನವರ ವಚನ ಸಂದೇಶಗಳು ಭಾರತಕ್ಕೆ ಮಾತ್ರ ಸೀಮಿತಗೊಂಡಿವೆ : ಪೂಜ್ಯ ಚನ್ನಬಸವಾನಂದ ಸ್ವಾಮೀಜಿ



**ದುಬೈ: ಡಿ.18:** ಬುದ್ಧ, ಮಹಾವೀರ, ಏಸುಕ್ರಿಸ್ತ ಮತ್ತು ಗುರು ನಾನಕರ ಸಮಾನತೆಯ ಸಂದೇಶಗಳು ವಿಶ್ವಮಟ್ಟದಲ್ಲಿ ಬೆಳೆದಿವೆ. ಆದರೆ ವಿಶ್ವಗುರು ಬಸವಣ್ಣನವರ ವಚನ ಸಂದೇಶಗಳು ಭಾರತಕ್ಕೆ ಮಾತ್ರ ಸೀಮಿತಗೊಂಡಿವೆ. ಶಾಲಾ ಕಾಲೇಜು ಸ್ಥಾಪಿಸಿ, ಹಣ ಸಂಪಾದನೆ ಮಾಡುವುದು ಸುಲಭ. ಆದರೆ ವಿಶ್ವಮಟ್ಟದಲ್ಲಿ ಬಸವ ತತ್ವದ ಪ್ರಚಾರ ಪ್ರಸಾರ ಮಾಡುವುದು ಕಠಿಣ. ಈ ಕಾರಣಕ್ಕಾಗಿ ಬಸವ ಸಂದೇಶಗಳನ್ನು ವಿಶ್ವಮಟ್ಟದಲ್ಲಿ ಪರಿಚಯಿಸುವ ಘನ ಉದ್ದೇಶ ನಮ್ಮದಾಗಿದೆ. ನೇಪಾಳ, ಭೂತಾನ್, ಶ್ರೀಲಂಕಾ, ದಕ್ಷಿಣ ಆಫ್ರಿಕಾ ಮತ್ತು ಮಾರಿಷಸ್ ನಲ್ಲಿ ಬಸವ ಸಮ್ಮೇಳನ ಮಾಡಲಾಗಿದೆ. ಏಳನೇ ಅಂತರಾಷ್ಟ್ರೀಯ ಬಸವ ತತ್ವ ಸಮ್ಮೇಳನ ಸಿಂಗಾಪುರ್ ನಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ಬೆಂಗಳೂರಿನ ಬಸವ ಗಂಗೋತ್ರಿಯ ಚನ್ನಬಸವೇಶ್ವರ ಜ್ಞಾನಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಮಹಾಸ್ವಾಮೀಜಿ ತಿಳಿಸಿದರು.

ರಾಷ್ಟ್ರೀಯ ಬಸವ ದಳ ಕೇಂದ್ರ ಸಮಿತಿ, ಗುರುಬಸವ ಫೌಂಡೇಶನ್ ಹೈದರಾಬಾದ್ ಹಾಗೂ ಚನ್ನಬಸವೇಶ್ವರ ಸಾಹಿತ್ಯಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ ವತಿಯಿಂದ ದುಬೈನ ಅಲ್ ರಿಂಗ್ ನಗರದ ರಸ್ವೆಲ್ಲಾ ಹೊಟೇಲ್ ಸಭಾಂಗಣದಲ್ಲಿ ಆಯೋಜಿಸಿದ ಆರನೇ ಬಸವ ತತ್ವ ಸಮ್ಮೇಳನದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಬುದ್ಧ, ಮಹಾವೀರ, ಏಸುಕ್ರಿಸ್ತ ಮತ್ತು ಗುರುನಾನಕರ ಸಮಾನತೆಯ ಸಂದೇಶಗಳು ವಿಶ್ವಮಟ್ಟದಲ್ಲಿ ಬೆಳೆದಿವೆ. ಆದರೆ ವಿಶ್ವಗುರು ಬಸವಣ್ಣನವರ ವಚನ ಸಂದೇಶಗಳು ಭಾರತಕ್ಕೆ ಮಾತ್ರ ಸೀಮಿತಗೊಂಡಿವೆ. ಶಾಲಾ ಕಾಲೇಜು ಸ್ಥಾಪಿಸಿ, ಹಣ ಸಂಪಾದನೆ ಮಾಡುವುದು ಸುಲಭ. ಆದರೆ ವಿಶ್ವಮಟ್ಟದಲ್ಲಿ ಬಸವ ತತ್ವದ ಪ್ರಚಾರ ಪ್ರಸಾರ ಮಾಡುವುದು ಕಠಿಣ. ಈ ಕಾರಣಕ್ಕಾಗಿ ಬಸವ ಸಂದೇಶಗಳನ್ನು ವಿಶ್ವಮಟ್ಟದಲ್ಲಿ ಪರಿಚಯಿಸುವ ಘನ ಉದ್ದೇಶ ನಮ್ಮದಾಗಿದೆ. ನೇಪಾಳ, ಭೂತಾನ್, ಶ್ರೀಲಂಕಾ, ದಕ್ಷಿಣ ಆಫ್ರಿಕಾ ಮತ್ತು ಮಾರಿಷಸ್ ನಲ್ಲಿ ಬಸವ ಸಮ್ಮೇಳನ ಮಾಡಲಾಗಿದೆ. ದುಬೈ ಸಮ್ಮೇಳನ ಯಶಸ್ವಿಯಾಗಿ ಜರುಗಿದೆ. ಇಲ್ಲಿರುವ ಕನ್ನಡಿಗರು ಕೂಡ ಪಾಲ್ಗೊಂಡಿರುವುದು ಸಂತಸ ತಂದಿದೆ ಎಂದು ಪೂಜ್ಯ ಸ್ವಾಮೀಜಿ ತಿಳಿಸಿದರು.

ದುಬೈ ಕನ್ನಡಿಗರು ಹಾಗೂ ಬಸವಾಭಿಮಾನಿ ಪ್ರಭುರಾಜ ಹರಕಂಗಿ ಮಾತನಾಡಿ ಪೂಜ್ಯ ಶ್ರೀ ಚನ್ನಬಸವಾನಂದ ಮಹಾಸ್ವಾಮಿಗಳು ವಿಶ್ವಮಟ್ಟದಲ್ಲಿ ಬಸವ ತತ್ವದ ಪ್ರಚಾರಗೈದು ಭಾರತದ ಕೀರ್ತಿ ಜಗತ್ತಿನಾದ್ಯಂತ ಪಸರಿಸುತ್ತಿರುವುದು ಖುಷಿಯಾಗಿದೆ. ದುಬೈನಲ್ಲಿ ಬಸವಣ್ಣನವರ ಪೂಜೆ, ಪ್ರಾರ್ಥನೆ, ಧ್ವಜಾರೋಹಣ, ಪುಸ್ತಕ ಲೋಕಾರ್ಪಣೆ, ಪೂಜ್ಯ ಸ್ವಾಮೀಜಿಯವರ ಆಶೀರ್ವಚನ ಕೇಳಿ ಭಾರತದಲ್ಲಿ ಇದ್ದಿರುವ ಅನುಭವವಾಯಿತು. ಚನ್ನಬಸವಾನಂದ ಸ್ವಾಮೀಜಿ ಬಹುಭಾಷಾ ಪ್ರಾವೀಣ್ಯತೆ ಹೊಂದಿರುವ ಪ್ರತಿಭಾವಂತರು. ಅವರ ಬಸವ ತತ್ವದ ಪ್ರಚಾರದ ಪಯಣ ವಿಶ್ವಮಟ್ಟದಲ್ಲಿ ಸಾಗಲಿ ಎಂದು ಪ್ರತಿಪಾದಿಸಿದರು.

ದುಬೈ ಕನ್ನಡಿಗರು ಹಾಗೂ ಅಭಿಯಂತರರಾದ ಅಭಿಷೇಕ ಹರಕಂಗಿ ಧಾರವಾಡ, ಶಿವಾನಂದ ಹೆಗಡೆ ಹುಬ್ಬಳ್ಳಿ, ಮಹಾಂತೇಯ್ಯಾ ಗಣಾಚಾರಿ, ಬಾಬುರಾವ ಸೊಂತ ಉಪಸ್ಥಿತರಿದ್ದರು. ಇದೇ ವೇಳೆ ಲಿಂಗಾಯತ ಧರ್ಮ ಸಾರ ಕೃತಿ ಲೋಕಾರ್ಪಣೆ ಮಾಡಲಾಯಿತು. ಸಮ್ಮೇಳನದಲ್ಲಿ ಭಾಗವಹಿದ ಶರಣರಿಗೆ ಪ್ರಮಾಣ ಪತ್ರ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಡಾ.ವೈಜಿನಾಥ ಭುಟ್ಟೆ ಧ್ವಜಾರೋಹಣ ನೆರವೇರಿಸಿದರು. ಶ್ರೀದೇವಿ ಪಾಟೀಲ, ಗಿರಿಜಮ್ಮ ಧಾರವಾಡ ಮತ್ತಿತರರು ಬಸವ ಪೂಜೆ ನೆರವೇರಿಸಿದರು. ಮಹಾರುದ್ರ ಡಾಕುಳಗೆ ವಚನ ಗಾಯನ ಮಾಡಿದರು. ನ್ಯಾಯವಾದಿ ಅಶೋಕ ಮಾನೂರೆ, ಪೂಜ್ಯ ಸತ್ಯಾದೇವಿ ಮಾತಾಜಿ, ನಾಗನಾಥ ಪಾಟೀಲ ಹೈದರಾಬಾದ, ಶ್ರೀನಾಥ ಕೋರೆ, ಸಂಗಮೇಶ ಕೆ.ಬಿ., ವಿದ್ಯಾ ಧಾರವಾಡ, ಜಗನ್ನಾಥ ಹೈದರಾಬಾದ, ಮಂಜುನಾಥ ಹೈದರಾಬಾದ, ಪ್ರಕಾಶ ಜಿ.ಕೆ, ಗಂಗಮ್ಮ ಸೇರಿದಂತೆ ಹಲವರಿದ್ದರು.

# ಬೀದರ್‌ನಲ್ಲಿ 3 ದಿನಗಳ ಕರಕುಶಲ ಪ್ರಾತ್ಯಕ್ಷಿಕೆ ಹಾಗೂ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ




**ಬೀದರ್,ಡಿ.18**–ಬ್ಲಾಕ್ ಗೋಲ್ಡ್ ಬಿದ್ರಿ ಕರಕುಶಲ ಉತ್ಪಾದಕರ ಕಂಪನಿ ನಿಯಮಿತ, ಬೀದರ್ ವತಿಯಿಂದ ಅಭಿವೃದ್ಧಿ ಆಯುಕ್ತರವರ (ಹಸ್ತಶಿಲ್ಪ) ಕಚೇರಿ, ವಸ್ತ್ರ ಮಂತ್ರಾಲಯ, ಭಾರತ ಸರ್ಕಾರ ಪ್ರಾಯೋಜಿತ ಎನ್.ಎಚ್.ಡಿ.ಪಿ. ಯೋಜನೆಯಡಿ ಆಯೋಜಿಸಲಾದ ಮೂರು ದಿನಗಳ ಕರಕುಶಲ ಪ್ರಾತ್ಯಕ್ಷಿಕೆ ಹಾಗೂ ಜಾಗೃತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಡಿಸೆಂಬರ್ 17ರಂದು ನಗರದ ಪನ್ನಾಲಾಲ್ ಹೀರಾಲಾಲ್ ಪ್ರೌಢ ಶಾಲೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಜಿಲ್ಲಾ ಕೈಗಾರಿಕಾ ಕೇಂದ್ರ ಬೀದರ್‌ನ ಜಂಟಿ ನಿರ್ದೇಶಕರಾದ ಶ್ರೀಮತಿ ಸುರೇಖಾ ಮುನ್ನೊಳ್ಳಿ ಅವರು ಉದ್ಘಾಟಿಸಿ ಮಾತನಾಡಿದರು. ಬಿದ್ರಿ ಕಲೆ ಜಗತ್ಪ್ರಸಿದ್ಧವಾದ ವಿಶಿಷ್ಟ ಕರಕುಶಲವಾಗಿದ್ದು, ಇಂತಹ ಜಾಗೃತಿ ಹಾಗೂ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳಿಂದ ಶಾಲಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಈ ಕಲೆಯ ಬಗ್ಗೆ ಸಮಗ್ರ ಮಾಹಿತಿ ದೊರಕಲಿದೆ ಎಂದು ಅವರು ಹೇಳಿದರು.

ಮುಖ್ಯ ಅತಿಥಿಗಳಾಗಿ ಅಭಿವೃದ್ಧಿ ಆಯುಕ್ತರವರ (ಹಸ್ತಶಿಲ್ಪ) ಕಚೇರಿ, ಧಾರವಾಡದ ಸಹಾಯಕ ನಿರ್ದೇಶಕರಾದ ಶ್ರೀ ಕೀರಣ ವಿ.ಎನ್. ಅವರು ಭಾಗವಹಿಸಿ ಮಾತನಾಡಿ, ವಸ್ತ್ರ ಮಂತ್ರಾಲಯ, ಭಾರತ ಸರ್ಕಾರದ ಮಾರ್ಗದರ್ಶನದಲ್ಲಿ ದೇಶಾದ್ಯಂತ ಕರಕುಶಲ ಉತ್ಪಾದಕರ ಕಂಪನಿಗಳನ್ನು ರಚಿಸಲಾಗುತ್ತಿದೆ. ಕರ್ನಾಟಕದಲ್ಲಿ ಮೊಟ್ಟ ಮೊದಲ ಬಿದ್ರಿ ಕರಕುಶಲ ಉತ್ಪಾದಕರ ಕಂಪನಿ 2020ರಲ್ಲಿ ಬೀದರ್‌ನಲ್ಲಿ ಸ್ಥಾಪನೆಯಾಗಿದೆ. 2025-26ನೇ ಸಾಲಿನಲ್ಲಿ ಈ ಕಂಪನಿಯ ಮೂಲಕ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರ ಭಾಗವಾಗಿಯೇ ಶಾಲಾ ಮಕ್ಕಳಿಗಾಗಿ ಮೂರು ದಿನಗಳ ಕರಕುಶಲ ಪ್ರಾತ್ಯಕ್ಷಿಕೆ ಹಾಗೂ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬ್ಲಾಕ್ ಗೋಲ್ಡ್ ಬಿದ್ರಿ ಕರಕುಶಲ ಉತ್ಪಾದಕರ ಕಂಪನಿ, ಬೀದರ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಂ.ಡಿ. ಶಫಿಯೊದ್ದೀನ್ ಅವರು, ಕಂಪನಿಯು 2020ರಲ್ಲಿ ನೋಂದಣಿಯಾಗಿದ್ದು, ಈ ವರ್ಷ ಈಗಾಗಲೇ ನಾಲ್ಕು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಕರಕುಶಲ ಕಲೆಗಳ ಬಗ್ಗೆ ಪ್ರಾತ್ಯಕ್ಷಿಕೆ ಹಾಗೂ ಜಾಗೃತಿ ಮೂಡಿಸುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳ ಕಚೇರಿ ಬೀದರ್‌ನ ವ್ಯವಸ್ಥಾಪಕ ಶ್ರೀ ಭೀಮಣ್ಣ, ಪನ್ನಾಲಾಲ್ ಹೀರಾಲಾಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಶ್ರೀ ಬ್ರಿಜ್ ಕಿಶೋರ್ ಮಲಾನಿ, ಕರಕುಶಲ ಅಭಿವೃದ್ಧಿ ಅಧಿಕಾರಿ ಧಾರವಾಡದ ಶ್ರೀ ಸುಶಾಂತ ಬಿ., ಪನ್ನಾಲಾಲ್ ಹೀರಾಲಾಲ್ ಪ್ರೌಢ ಶಾಲೆಯ ಮುಖ್ಯಗುರುಗಳಾದ ಶ್ರೀಮತಿ ಸುಧಾರಾಣಿ ಬಿರಾದರ ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶಫಿಯೊದ್ದೀನ್ ರಹಮಾನ, ಫರ್ಜಾನ ಬೇಗಂ, ಶಾಹೀದಾ ಬೇಗಂ ಹಾಗೂ ಜಗದೀಶ ಕಾಂಬಳೆ ಅವರು ವಿವಿಧ ಕರಕುಶಲ ಕಲೆಗಳ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಪನ್ನಾಲಾಲ್ ಹೀರಾಲಾಲ್ ಪ್ರೌಢ ಶಾಲೆಯ ಸುಮಾರು 200 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವು ಶ್ರೀ ದೇವೇಂದ್ರಕುಮಾರ ಗಾಯಕ್ವಾಡ ಅವರ ಸ್ವಾಗತ ಭಾಷಣ ಹಾಗೂ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

# ಕೆಪಿ ವಿದ್ಯಾ ಸಂಸ್ಥೆಯಲ್ಲಿ ಮಾಜಿ ಸಿಎಂ ಜಗದೀಶ ಶೆಟ್ಟರ್ ಜನ್ಮದಿನ ಆಚರಣೆ



**ಬೀದರ,ಡಿ.18**–ನಗರ ಕೆಪಿ ವಿದ್ಯಾ ಸಂಸ್ಥೆಯಲ್ಲಿ ಇಂದು ಮಾಜಿ ಮುಖ್ಯಮಂತ್ರಿಗಳು ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಸದಸ್ಯರಾದ ಜಗದೀಶ ಶೆಟ್ಟರ ಅವರ ಜನ್ಮದಿನವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಕೆಪಿ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಬಾಬು ವಾಲಿ ಮತ್ತು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರಾದ ಸೋಮನಾಥ ಪಾಟೀಲ ವಿದ್ಯಾರ್ಥಿಗಳಿಗೆ ಕೇಕ್ ಜನ್ಮದಿನದಂದು ಶುಭ ಹಾರೈಸಿದರು.

ಸರಳ ಸಜ್ಜನ ರಾಜಕಾರಣಿಯ ಮತ್ತೊಂದು ಹೆಸರು ಜಗದೀಶ ಶೆಟ್ಟರ್ ಬಹಳಷ್ಟು ಸಂಧರ್ಭದಲ್ಲಿ ಅವರ ಅಡಿಯಲ್ಲಿ ನಾವು ಕೆಲಸ ಮಾಡಿದ್ದೇವೆ. ನಮ್ಮ ಸಂಸ್ಥೆಗೆ ಅವರ ಕೊಡುಗೆ ಅಪಾರವಿದೆ. ಅವರಿಗೆ ದೇವರು ಒಳ್ಳೆ ಆರೋಗ್ಯ ಆಯುಷ ನೀಡಲಿ. ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್ ಅವರ ಜನ್ಮದಿನವನ್ನು ಪ್ರತಿ ವರ್ಷವೂ ನಮ್ಮ ಆಚರಿಸುತ್ತೇವೆ ಎಂದು ಕೆಪಿ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಬಾಬು ವಾಲಿ ತಿಳಿಸಿದರು.

ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷರಾದ ಸೋಮನಾಥ ಪಾಟೀಲ ಅವರು ಮಾತನಾಡಿ ಒಂದು ತತ್ವಾದರ್ಶಗಳನ್ನು ಇಟ್ಟುಕೊಂಡು ರಾಜಕಾರಣಕ್ಕೆ ಬಂದವರು, ಅವರು ತಂದೆಯೂ ಕೂಡ ಒಳ್ಳೆ ಶಾಸಕರಾಗಿ ಜನಸೇವೆ ಸಲ್ಲಿಸಿದರು. ಮಾಜಿ ಸಿಎಂ ಜಗದೀಶ ಶೆಟ್ಟರ್ ಅವರು ಸರಳ ವ್ಯಕ್ತಿತ್ವ ಹೊಂದಿದವರು ಶಾಸಕರಾಗಿ ಮಂತ್ರಿಯಾಗಿ ಮುಖ್ಯಮಂತ್ರಿಯಾಗಿ ಮತ್ತು ಸದ್ಯ ಲೋಕಸಭಾ ಸದಸ್ಯರಾಗಿ ಜನಸೇವೆಯಲ್ಲಿ ತಮ್ಮನ್ನು ತಾವು ತೊಡಗಿಕೊಂಡಿದ್ದಾರೆ. ದೇವರು ಅವರಿಗೆ ಉತ್ತಮ ಆರೋಗ್ಯ ನೀಡಲಿ ಎಂದು ಹೇಳಿ ಈ ಸಂಧರ್ಭದಲ್ಲಿ ಶುಭ ಹಾರೈಸಿದರು.

ಈ ಸಂಧರ್ಭದಲ್ಲಿ ಶಿಕ್ಷಕಿಯರಾದ ಕಸ್ತೂರಿ ಅನಿತಾ ಭಾಗ್ಯಲಕ್ಷ್ಮಿ ಸ್ವಾಗತಿಸಿದರು. ಶಿಕ್ಷಕರಾದ ಶರ್ಮಾ ಅವರು ನಿರೂಪಿಸಿದರು. ಸಂಸ್ಥೆಯ ಶಿಕ್ಷಕ ವೃಂದ ವಿದ್ಯಾರ್ಥಿಗಳು ಈ ಸಂಧರ್ಭದಲ್ಲಿ ಉಪಸ್ಥಿತರಿದ್ದರು.

# ಸಿ.ಎಂ.ಕಾರ್ಯಕ್ರಮ ಹಿನ್ನೆಲೆ: ಯಡ್ರಾಮಿಗೆ ಡಿ.ಸಿ.ಭೇಟಿ, ಕಾರ್ಯಕ್ರಮ ಸ್ಥಳ ಪರಿಶೀಲನೆ


**ಕಲಬುರಗಿ,ಡಿ.18**–ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೆ.ಕೆ.ಅರ್.ಡಿ.ಬಿ. ಮಂಡಳಿ ಅನುದಾನದಲ್ಲಿ ನಿರ್ಮಿಸಲಾಗುವ "ಪ್ರಜಾ ಸೌಧ" ಕಟ್ಟಡಗಳ ಶಂಕುಸ್ಥಾಪನೆ ನೆರವೇರಿಸಲು ಜನವರಿ ಮಾಹೆಯಲ್ಲಿ ಯಡ್ರಾಮಿ ಪಟ್ಟಣಕ್ಕೆ ಮುಖ್ಯಮಂತ್ರಿಗಳು ಆಗಮಿಸುವ ಹಿನ್ನೆಲೆಯಲ್ಲಿ ಇತ್ತೀಚೆಗೆ ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರು ಯಡ್ರಾಮಿ ಪಟ್ಟಣಕ್ಕೆ ಭೇಟಿ ನೀಡಿ ಕಾರ್ಯಕ್ರಮ ನಡೆಯುವ ಸ್ಥಳ ಪರಿಶೀಲಿಸಿದರು.



# ಕಾ. ನಿ. ಪ. ಸಂಘಕ್ಕೆ ನೂತನ ಅಧ್ಯಕ್ಷರಾಗಿ ಮಂಜುನಾಥ್ ಆಯ್ಕೆ

**ಕೊಟ್ಟೂರು, ಡಿ.18**–ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘದ ನೂತನ ತಾಲೂಕು ಅಧ್ಯಕ್ಷರಾಗಿ ಬಿ. ಮಂಜುನಾಥ್ ಅವಿರೋಧ ಆಯ್ಕೆಯಾದರು.

ಪಟ್ಟಣ ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಅಧ್ಯಕ್ಷ ಸತ್ಯನಾ ರಾಯಣ ನೇತೃತ್ವದಲ್ಲಿ ನಡೆದ ಚುನಾವಣೆ ಪ್ರಕ್ರಿಯೆ ಯಲ್ಲಿ ಅಧ್ಯಕ್ಷರಾಗಿ ಬಿ. ಮಂಜುನಾಥ್, ಉಪಾಧ್ಯಕ್ಷರಾಗಿ ಸಿ. ಕೊಟ್ರೇಶ್, ಪ್ರದಾನ ಕಾರ್ಯದರ್ಶಿಯಾಗಿ ಬಿ. ಪ್ರಕಾಶ್, ಖಜಾಂಚಿ ನಾಗರಾಜ್ ಅವರನ್ನು ಅವಿರೋಧ ಆಯ್ಕೆ ಮಾಡಿ ಆದೇಶ ಹೊರಡಿಸಲಾಯಿತು.ನಂತರ ಜಿಲ್ಲಾ ಅಧ್ಯಕ್ಷ ಸತ್ಯ ನಾರಾಯಣ ಮಾತನಾಡಿ, ಯಾವುದೇ ಸಮಸ್ಯೆ ಬಂದರೂ ನಾವು ಹಿಂದೆ ಬೆನ್ನೆಲುಬು ನಿಂತಿರುತ್ತೇವೆ ಪ್ರತಿಯೊಬ್ಬರು ಒಗ್ಗಟ್ಟಾಗಿ ಈ ಸಂಘವನ್ನು ಮುನ್ನಡೆಸಿ ಎಂದರು.



ಈ ಹಿಂದೆ ದೇವರಮನಿ ಸುರೇಶ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯ ಸಮಿತಿಯ ಸದಸ್ಯ ವೆಂಕೋಬ ನಾಯಕ್, ಜಿಲ್ಲಾ ಉಪಾಧ್ಯಕ್ಷರಾದ ಉಜ್ಜಿನಿ ರುದ್ರಪ್ಪ, ಸಿ ಕೆ ನಾಗರಾಜ್, ಪ್ರದಾನ ಕಾರ್ಯದರ್ಶಿ ಲಕ್ಷ್ಮಣ, ಕಾರ್ಯದರ್ಶಿಗಳಾದ ಸುರೇಶ್ ಚೌಹಣ, ಸಂಜಯ್ ಕುಮಾರ್, ರವಿ ಕುಮಾರ್, ಖಜಾಂಚಿ ವೆಂಕಟೇಶ್ ಸೇರಿ ಸಂಘದ ಪದಾಧಿಕಾರಿಗಳು ಇದ್ದರು.

ಯುವ ಮಾರ್ಗ

www.yuvamarga.com Yuva Marga yuva_marga_

## ರಾಯಚೂರು ಜಿಲ್ಲೆಯಲ್ಲಿ ತೊಗರಿ ಖರೀದಿ ಕೇಂದ್ರಗಳು ಆರಂಭ

**ರಾಯಚೂರು,ಡಿ.18–**ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ 2025–26ನೇ ಸಾಲಿನಲ್ಲಿ ರೈತರಿಂದ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನ ಖರೀದಿಸಲು ರಾಯಚೂರು ಜಿಲ್ಲೆಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ತೊಗರಿ ಮಾರಾಟ ಮಾಡಿ ಸರ್ಕಾರದ ಯೋಜನೆಯ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಜಿಲ್ಲೆಯ ರೈತರಲ್ಲಿ ಮನವಿ ಮಾಡಿದ್ದಾರೆ.

ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ, ರೈತರಿಂದ ತೊಗರಿ ಉತ್ಪನ್ನವನ್ನು ಪ್ರತಿ ಎಕರೆಗೆ 4 ಕ್ವಿಂಟಾಲ್ ಹಾಗೂ ತೊಗರಿ ಬೆಳೆದ ಜಮೀನಿನ ವಿಸ್ತೀರ್ಣಕ್ಕೆ ಅನುಗುಣವಾಗುವಂತೆ ಖರೀದಿ ಪ್ರಮಾಣ ನಿಗಧಿಪಡಿಸಿದ್ದು, ಎಫ್.ಎ.ಕ್ಯೂ ಗುಣ ಮಟ್ಟದ ಪ್ರತಿ ಕ್ವಿಂಟಾಲ್ ಗೆ 8000 ರೂ.ಗಳಂತೆ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲಾಗುವುದು.

ಆಸಕ್ತ ರೈತರಿಗೆ ದಿನಾಂಕ 17–12–2025 ರಿಂದ ರೈತರ ನೋಂದಣಿ ಕಾಲಾವಧಿಯನ್ನು 80 ದಿನಗಳವರೆಗೆ ನಿಗದಿ ಮಾಡಿದೆ. ರೈತ ಬಾಂಧವರು ಫ್ರೂಟ್ಸ್ ಐ.ಡಿ, ಆಧಾರ್ ಕಾರ್ಡ್, ಪಹಣಿಯೊಂದಿಗೆ ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಬೇಕು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

## ನಿರುದ್ಯೋಗಿ ಮಹಿಳೆಯರಿಗೆ ಆರ್ಥಿಕ ನೆರವಿಗೆ ಅರ್ಜಿ ಆಹ್ವಾನ

**ರಾಯಚೂರು,ಡಿ.18–**ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 2025–26ನೇ ಸಾಲಿನಲ್ಲಿ ನಿರುದ್ಯೋಗಿ ಮಹಿಳೆಯರಿಗೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಗಳಲ್ಲಿ ಆರ್ಥಿಕ ನೆರವನ್ನು ನೀಡಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಉದ್ಯೋಗಿನಿ ಯೋಜನೆಯಡಿ 18–55 ವಯೋಮಿತಿಯೊಳಗಿರುವ ಆರ್ಥಿಕವಾಗಿ ಹಿಂದುಳಿದ ಮತ್ತು ಸಾಮಾನ್ಯ ಮಹಿಳೆಯರು ಯಾವುದಾದರೂ ಲಾಭದಾಯಕ ಚಟುವಟಿಕೆಯಲ್ಲಿ ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಬ್ಯಾಂಕಿನಿಂದ ಗರಿಷ್ಠ 3 ಲಕ್ಷ ರೂ.ಗಳವರೆಗೆ ಸಾಲ ಹಾಗೂ ಸಾಮಾನ್ಯ ವರ್ಗದ ಮಹಿಳೆಯರಿಗೆ, ವಿಧವೆ, ಅಂಗವಿಕಲರು ಹಾಗೂ ಸಂಕಷ್ಠ ಮಹಿಳೆಯರಿಗೆ ಗರಿಷ್ಠ 90,000ರೂ. ಅಥವಾ ಶೇ.30 ರಷ್ಟುಗಳವರೆಗೆ ಸಹಾಯಧನ ನೀಡಲಾಗುತ್ತದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮಹಿಳೆಯರಿಗೆ ಗರಿಷ್ಟ 15,000ರೂ. ಅಥವಾ ಶೇ.50 ರಷ್ಟುಗಳವರೆಗೆ ಸಹಾಯಧನವನ್ನು ನೀಡಲಾಗುವುದು.

ಧನಶ್ರೀ, ಚೇತನ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಗಳಲ್ಲಿ 18–60 ವಯೋಮಿತಿಗೊಳಗಿರುವ ಸಂಸ್ಥೆಯಲ್ಲಿ ನೋಂದಣಿಯಾಗಿರುವ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಯಾವುದಾದರೂ ಲಾಭದಾಯಕ ಚಟುವಟಿಕೆಯಲ್ಲಿ ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಆಯ್ಕೆ ಸಮಿತಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ನಿಗಮದಿಂದ ನೇರವಾಗಿ 30,000ರೂ. ಸಹಾಯಧನವನ್ನು ಡಿ.ಬಿ.ಟಿ ಮೂಲಕ ಅವರ ಖಾತೆಗೆ ಜಮೆ ಮಾಡಲಾಗುತ್ತದೆ. ಆಸಕ್ತರು ಜನವರಿ 15ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ದಾಖಲೆಗಳು: 2025–26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸುವುದು (ರೂ.20,000–00 ಗಳಿಗಿಂತ ಮೀರದ ವಾರ್ಷಿಕ ಆದಾಯ ಇರತಕ್ಕದ್ದು), ಸಾಮಾನ್ಯ ಮಹಿಳೆಯರಿಗೆ (ರೂ.150000–00 ಗಳಿಗಿಂತ ಮೀರದ ವಾರ್ಷಿಕ ಆದಾಯ ಇರತಕ್ಕದ್ದು). ಬಿ.ಪಿ.ಎಲ್ ಕಾರ್ಡ್, ವಾಸಸ್ಥಳ ದೃಢೀಕರಣ ಪತ್ರ, ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್, ಶಾಲಾ ವರ್ಗಾವಣೆ ಪ್ರಮಾಣ ಪತ್ರ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಲಗತ್ತಿಸುವುದು. ವಿಧವೆ, ಅಂಗವಿಕಲರು, ಸಂಕಷ್ಠಗೊಳಗಾದ ಮಹಿಳೆಯರು ಪ್ರಮಾಣ ಪತ್ರ ಲಗತ್ತಿಸುವುದು. ಯೋಜನಾ ವರದಿ ಹಾಗೂ ಚಾಲ್ತಿಯಲ್ಲಿರುವ ಬ್ಯಾಂಕ್ ಪಾಸ್ ಪುಸ್ತಕದ ಮುಖಪುಟ ಮತ್ತು ಎನ್‌ಪಿಸಿಐ ಮ್ಯಾಪಿಂಗ್ ಪ್ರತಿ. ಚೇತನ, ಧನಶ್ರೀ, ಲಿಂಗತ್ವ ಅಲ್ಪಸಂಖ್ಯಾತರ ಯೋಜನೆಯಡಿ ಸಂಬಂಧಿಸಿದ ಸಿ.ಬಿ.ಓ ಕಡೆಯಿಂದ ಪತ್ರ ಎ.ಆರ್.ಟಿ ಪತ್ರ ಸ್ವಯಂ ಘೋಷಣೆ ಸಲ್ಲಿಸುವುದು. ವಿವೇಚನ ಕೋಟಾದಡಿ ಸೌಲಭ್ಯ ಪಡೆಯಲು ಇಚ್ಚಿಸುವ ಅರ್ಜಿದಾರರು ಮಾನ್ಯ ಸಚಿವರು/ ಮಾನ್ಯ ಶಾಸಕರು/ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರು ಇವರ ಶಿಫಾರಸ್ಸು ಪತ್ರದೊಂದಿಗೆ ಅರ್ಜಿಸಲ್ಲಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗ್ರಾಂ.ಚಿನ್ನಾಭರಣ, 3.20 ಲಕ್ಷ ನಗದು ಕಳವು

**ಕಲಬುರಗಿ,ಡಿ.18–**ಮನೆ ಕೊಂಡಿ ಮುರಿದು 41 ಗ್ರಾಂ.ಚಿನ್ನಾಭರಣ ಮತ್ತು 3.20 ಲಕ್ಷ ರೂ.ನಗದು ಹಣ ಕಳವು ಮಾಡಿರುವ ಘಟನೆ ನಗರದ ಗಣೇಶ ನಗರದಲ್ಲಿ ನಡೆದಿದೆ.ಪ್ರಕಾಶ್ ಪಾಟೀಲ ಎಂಬುವವರ ಮನೆ ಕೊಂಡಿ ಮುರಿದು ಕಳ್ಳರು 1.40 ಲಕ್ಷ ರೂ.ಮೌಲ್ಯದ 20 ಗ್ರಾಂ.ಬಂಗಾರದ 4 ಸುತ್ತುಂಗುರ, 1,05 ಲಕ್ಷ ರೂ.ಮೌಲ್ಯದ 15 ಗ್ರಾಂ.ಬಂಗಾರದ ಲಾಕೇಟ್, 42 ಸಾವಿರ ರೂ.ಮೌಲ್ಯದ ತಲಾ 6 ಗ್ರಾಂ.ಬಂಗಾರದ 2 ಬೆಂಡೋಲೆಗಳು ಸೇರಿ 41 ಗ್ರಾಂ.ಬಂಗಾರದ ಆಭರಣ ಮತ್ತು 3.20 ಲಕ್ಷ ರೂ.ನಗದು ಹಣ ಕಳವು ಮಾಡಿದ್ದಾರೆ.ಈ ಸಂಬಂಧ ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

## ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳು ಅಚ್ಚುಕಟ್ಟಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ ಶಿವಾನಂದ

ಯುವಮಾರ್ಗ ಸುದ್ದಿ



**ರಾಯಚೂರು,ಡಿ.18–** ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಜನವರಿ 8 ಹಾಗೂ 9ರಂದು ನಡೆಯಲಿದ್ದು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಹೇಳಿದರು.

ಡಿಸೆಂಬರ್ 17ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಸರಕಾರಿ ನೌಕರರ ಜಿಲ್ಲಾಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸರಕಾರಿ ನೌಕರರ ಕ್ರೀಡಾಕೂಟದಲ್ಲಿ ಪುರುಷರ 45 ವರ್ಷ ಒಳಗಿನ ಮತ್ತು 45 ವರ್ಷ ಮೇಲ್ಪಟ್ಟ ವಿಭಾಗ ಮಾಡಲಾಗಿದೆ. ಅದೇ ರೀತಿ ಮಹಿಳೆಯರಿಗೆ 40 ವರ್ಷ ಒಳಗಿನ ಮತ್ತು 40 ವರ್ಷ ಮೇಲ್ಪಟ್ಟವರಿಗಾಗಿ ಸ್ಪರ್ಧೆಗಳು ನಡೆಯಲಿವೆ ಎಂದರು.

ನೌಕರರು ಪಾಲ್ಗೊಳ್ಳಲು ಆನ್‌ಲೈನ್‌ನಲ್ಲಿ ಕಡ್ಡಾಯವಾಗಿ ನೊಂದಣಿ ಮಾಡಿಕೊಳ್ಳಲು ಅಗತ್ಯ ವ್ಯವಸ್ಥೆ ಕೈಗೊಳ್ಳಬೇಕು. ಕೆಜಿಐಡಿ ಸಂಖ್ಯೆಯೊಂದಿಗೆ ಆಯಾ ಕಚೇರಿ ಮುಖ್ಯಸ್ಥರಿಂದ ದೃಢೀಕರಣ ಪತ್ರ ಹಾಜರುಪಡಿಸಬೇಕು. ಕ್ರೀಡಾಂಗಣದಲ್ಲಿ ಕುಡಿಯುವ ನೀರು, ನೆರಳು, ತುರ್ತು ವೈದ್ಯಕೀಯ ನೆರವು, ಊಟೋಪಹಾರ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆ ಕೈಗೊಳ್ಳಲು ಪ್ರತ್ಯೇಕ ಉಪಸಮಿತಿ ರಚಿಸಲಾಗುತ್ತದೆ ಎಂದರು.

ವಾರ್ಷಿಕ ಕ್ರೀಡಾಕೂಟ ಆಯೋಜನೆ ಕುರಿತಂತೆ ಉಪ ಸಮಿತಿ ಯವರು, ಪದಾಧಿಕಾರಿಗಳು ತಮಗೆ ವಹಿಸುವ ಜವಾಬ್ದಾರಿ ಗಳನ್ನು ಸಮರ್ಪಕವಾಗಿ ನಿಭಾಯಿಸಿ ಸಹಕಾರ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವರ್ಷವಿಡೀ ಕರ್ತವ್ಯ ನಿರ್ವಹಣೆ, ಸಾರ್ವಜನಿಕ ಕೆಲಸ, ಸರ್ಕಾರಿ ಯೋಜನೆಗಳ ಅನುಷ್ಠಾನದಲ್ಲಿ ನಿರತರಾದ ನೌಕರರಿಗೆ ವರ್ಷದ 2 ದಿನ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಮೂಲಕ ಉತ್ಸಾಹ ತುಂಬಿ ಕರ್ತವ್ಯ ನಿರ್ವಹಣೆಗೆ ಮತ್ತಷ್ಟು ಪ್ರೇರಣೆ ನೀಡೋಣ ಎಂದರು.

ಈ ವೇಳೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿರೇಶ ನಾಯಕ ಅವರು ಮಾತ ನಾಡಿ, ಕ್ರೀಡಾಕೂಟದ ಉದ್ಘಾಟನಾ ಸಮಾರಂಭ ಜನವರಿ 8 ರಂದು ಬೆಳಗ್ಗೆ 9ಗಂಟೆಗೆ ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದರು.

ಈ ವೇಳೆ ಸರ್ಕಾರಿ ನೌಕರರ ಜಿಲ್ಲಾಧ್ಯಕ್ಷರಾದ ಕೃಷ್ಣ ಶಾಂವತಗೇರಾ ಅವರು ಮಾತನಾಡಿ, ನೌಕರರ ಕ್ರೀಡಾಕೂಟವನ್ನು ಅದ್ದೂರಿಯಾಗಿ ನಡೆಸಬೇಕು. ಅತಿ ಹೆಚ್ಚು ನೌಕರರು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿ ದ್ದಾರೆ. ಈ ಬಾರಿ ಸಂಭ್ರಮದಿಂದ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆ ನಡೆಸಬೇಕು. ಕ್ರೀಡಾಕೂಟದ ವ್ಯವಸ್ಥೆಗೆ ಸಂಬಂಧಿಸಿ ದಂತೆ ಜವಾಬ್ದಾರಿಯನ್ನು ವಹಿಸಿಕೊಂಡ ಇಲಾಖೆಗಳು ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಬೇಕೆಂದರು.

ಇದೇ ಸಂದರ್ಭದಲ್ಲಿ ರಾಯಚೂರು ತಹಶೀಲ್ದಾರ್ ಸುರೇಶ ವರ್ಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಸರ್ಕಾರಿ ನೌಕರರ ಸಂಘದ ಪದಧಿಕಾರಿಗಳಾದ ಸಮತೋಷ, ರಾಜಶೇಖರ, ರಾಮು ಸೇರಿದಂತೆ ಇತರರು ಇದ್ದರು.

## ಮಾನ್ವಿ ಪಶ್ಚಿಮ ವಲಯದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ

ಯುವಮಾರ್ಗ ಸುದ್ದಿ



**ಮಾನ್ವಿ,ಡಿ.18–** ನಗರದ ಪಶ್ಚಿಮ ವಲಯದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಸ್ಪರ್ಧೆಗಳನ್ನು ಶಿಕ್ಷಣ ಇಲಾಖೆಯ ಸಹಕಾರದಲ್ಲಿ ನಗರದ ಎಸ್ ವಿ ಎಸ್ ಶಾಲೆಯಲ್ಲಿ ಆಯೋಜನೆ ಮಾಡಲಾಗಿತ್ತು. ವಲಯದ ವಿವಿಧ ಶಾಲೆಗಳ ಮಕ್ಕಳು ಅನೇಕ ಪದ್ಯಗಳಲ್ಲಿ ಭಾಗವಹಿಸಿ ತಮ್ಮ ಕಲೆಗಳನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಸಂಗಮೇಶ್ ಮುಧೋಳ್ ಅಧ್ಯಕ್ಷರು ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಸುರೇಶ್ ಕುರುಡಿ ಸರ್ಕಾರಿ ನೌಕರರ ಅಧ್ಯಕ್ಷರು, ಮಾರುತಿ ಟಿಪಿಓ, ಹಂಪಣ್ಣ ಚಂಡೂರ್, ಕಾರ್ಯದರ್ಶಿಗಳು, ಅನುಷಾ ರೆಡ್ಡಿ ಆಡಳಿತ ಅಧಿಕಾರಿಗಳು, ಅಂಜಾನ್ ರೆಡ್ಡಿ ಧ್ಯಕ್ಷರು ಎಸ್‌ವಿ ಎಸ್ ಶಾಲೆ ಇವರುಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಮಾನ್ವಿ ಪಶ್ಚಿಮ ವಲಯದ ಸಂಪನ್ಮೂಲ ಶಿಕ್ಷಕ ಶ್ರೀಧರ್ ದೇಸಾಯಿ ಪ್ರತಿಭಾ ಕಾರಂಜಿ ಮಕ್ಕಳಲ್ಲಿನಾ ಕಲೆಗಳನ್ನು ಹೊರಗೆ ತರಲು ಒಂದು ಉತ್ತಮ ವೇದಿಕೆಯಾಗಿದೆ. ಶಾಲೆಗಳ ವಿದ್ಯಾರ್ಥಿಗಳು ಈ ವೇದಿಕೆಯ ಸದುಪಯೋಗಪಡಿಸಿಕೊಂಡು ತಮ್ಮ ಕಲೆಗಳನ್ನು ಪ್ರದರ್ಶಿಸಬೇಕು ಎಂದರು. ನಂತರ ವಿಜೇತರಿಗೆ ಪ್ರಮಾಣಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಗುರುಗಳು, ಶಿಕ್ಷಕರಾದ ಮಲಕಣ್ಣ, ವಿಶ್ವನಾಥ್ ಗೌಡ ಸೇರಿದಂತೆ ಶಿಕ್ಷಕ ವೃಂದ ಉಪಸ್ಥಿತರಿದ್ದರು.

## ಡಿ.20.ರಂದು ಹೆಗ್ಗಡದಿನ್ನಿಯ ಶ್ರೀಆಂಜನೇಯ ಮಹಾರಥೋತ್ಸವ

ಯುವಮಾರ್ಗ ಸುದ್ದಿ



**ಅರಕೇರಾ,ಡಿ.18–** ತಾಲೂಕಿನ ಹೆಗ್ಗಡದಿನ್ನಿ ಗ್ರಾಮದಲ್ಲಿ ಶ್ರೀ ಮಾರುತೇಶ್ವರ ಜಾತ್ರೆಯು ಪ್ರತಿ ವರ್ಷ ತುಂಬಾ ವಿಜೃಂಭಣೆಯಿಂದ ನೆರವಿರಲಿದ್ದು.ಈ ಒಂದು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸುಲ್ತಾನ್ ಪುರದ ಬೃಹನ್ ಮಠದ ಮಹಾಸ್ವಾಮಿಗಳಾದ ಶಂಭುಲಿಂಗ ಸೋಮನಾಥ ಶಿವಾಚಾರ್ಯರು ದಿವ್ಯ ಸಾನಿಧ್ಯವನ್ನು ವಹಿಸಿಕೊಂಡಿರುತ್ತಾರೆ. ಬೆಳಿಗ್ಗೆ ರುದ್ರಭಿಷೇಕ ಪೂಜೆ, ಜ್ಯೋತಿ ಹೊರುವುದು. ಮರುದಿನ ಕೊಡುಬಿನ ಕಾಳಗ ಇನ್ನು ಹಲವಾರು ಕಾರ್ಯಕ್ರಮಗಳು ಜರುಗುವುದು.

ಈ ಮಾರುತೇಶ್ವರ ಸ್ವಾಮಿ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ಕಳೆಯುತ್ತಾ ಭಕ್ತರ ಮನದಲ್ಲಿ ನೆಲೆಯಾಗಿ ನಿಂತು ಇಂದಿಗೂ ಅವರ ಕಷ್ಟಕ್ಕೆ ದಾರಿತೋರುತ್ತಾ ದಾರಿ ದೀಪವಾಗಿ ನಿಂತಿದ್ದಾರೆ.

ಇಂತ ಶಕ್ತಿಯುಳ್ಳ ಸ್ವಾಮಿಯ ಜಾತ್ರೆಗೆ ಸುತ್ತಮುತ್ತಲಿನ ಹಳ್ಳಿನ ಭಕ್ತಾದಿಗಳು ಭಾಗವಹಿಸಬೇಕು.ಮತ್ತು ಸಂಜೆ 5:30ಕ್ಕೆ ಉಚ್ಚಯ ಹಾಗೂ ರಥೋತ್ಸವ ಕಾರ್ಯಕ್ರಮ ಜರಗಲಿದ್ದು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಶ್ರೀ ವೇ. ಮೊ.ಗುರುಪಾದಯ್ಯ ಸ್ವಾಮಿ ಹಿರೇಮಠ ಅವರು ತಿಳಿಸಿದ್ದಾರೆ.

## ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಮಹಾದಾನಿಗಳಿಗೆ ಸನ್ಮಾನ



**ಮಾನ್ವಿ,ಡಿ.18–** ಪಟ್ಟಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಗೆ ಒಂದು ಲಕ್ಷ ದೇಣಿಗೆಯನ್ನು ನೀಡಿ ಮಹಾದಾನಿಗಳ ಸದಸ್ಯತ್ವವನ್ನು ಪಡೆದಿರುವ ತಾಲೂಕಿನ ಗಣ್ಯರಾದ ಸಿದ್ದಲಿಂಗಪ್ಪ ವಕೀಲರು ಚಿಕ್ಕಕೊಟ್ನೆಕಲ್ ರವರನ್ನು ಅ.ಖಿ.ಭಾ.ವೀ.ಲಿಂ.ಮಹಾಸಭಾದ ತಾಲೂಕ ಅಧ್ಯಕ್ಷರಾದ ಅರುಣ್ ಚಂದಾ ರವರು ಹಾಗೂ ಪದಾಧಿಕಾರಿಗಳು ಸಮಾಜದ ಗಣ್ಯರು ಸನ್ಮಾನಿಸಿ ಗೌರವಿಸಿದರು.

## ಇಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಡಿ.18–**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಶಾಖೆ–2 ಹಾಗೂ 1ರಲ್ಲಿ ಎಲ್.ಟಿ ಲೈನ್ ರೋಡ್ ವೈಡ್‌ನಿಂಗ್ ಕಾಮಗಾರಿ ಕೈಗೊಂಡ ಪ್ರಯುಕ್ತ ಡಿಸೆಂಬರ್ 19ರ ಬೆಳಿಗ್ಗೆ 10ರಿಂದ ಸಂಜೆ 5ಗಂಟೆಯವರೆಗೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕಾರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ 10ರಿಂದ ಅಸ್ಕಿಹಾಳ, ಅಸ್ಕಿಹಾಳ ಮೇನ್ ರೋಡ್, ಕೋಲ್ಡ್ ಸ್ಟೋರೇಜ್ ಎದುರುಗಡೆ, ನಾಗರಕಟ್ಟೆ, ಕೃಷ್ಣ ಮೇಡೌಸ್, ಬೈಪಾಸ್ ರೋಡ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ 08532–226386, 08532–231999, 9480845955 ಮತ್ತು 9448395624ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 22ರಂದು ಶಿಶಿಕ್ಷು ಮೇಳ

**ರಾಯಚೂರು,ಡಿ.18–**ಇಲ್ಲಿನ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ವತಿಯಿಂದ 2025–26ನೇ ಸಾಲಿನಲ್ಲಿ ಪಿಎಮ್‌ಎನ್‌ಎಎಮ್ ಅಡಿಯಲ್ಲಿ ನಗರದ ಮಾಣಿಕ ನಗರ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಡಿಸೆಂಬರ್ 22ರ ಬೆಳಿಗ್ಗೆ 10 ಗಂಟೆಗೆ ಶಿಶಿಕ್ಷು ಮೇಳವನ್ನು ಆಯೋಜಿಸಲಾಗಿದೆ.

ಈ ಮೇಳದಲ್ಲಿ ರಾಜ್ಯದ ಹಾಗೂ ವಿವಿಧ ಜಿಲ್ಲೆಯ ಪ್ರತಿಷ್ಠಿತ ಕಂಪನಿಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದು, ಶಿಶಿಕ್ಷು ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆಮಾಡಿಕೊಳ್ಳುತ್ತಿರುವುದರಿಂದ ಐಟಿಐ ದ್ವಿತೀಯ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ಹಾಗೂ ಈಗಾಗಲೇ ಐಟಿಐ ಉತ್ತೀರ್ಣರಾದ ತರಬೇತಿದಾರರು ಮತ್ತು ಪಿಯುಸಿ ಹಾಗೂ ಪದವಿಯಲ್ಲಿ ಉತ್ತೀರ್ಣರಾದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 8904784507 ಅಥವಾ 9035064582ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಭೀಮಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿಸೆಂಬರ್ 20ರಂದು ವಿದ್ಯುತ್ ವ್ಯತ್ಯಯ

**ರಾಯಚೂರು,ಡಿ.18–**ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗದ ನೋಡಲ್ ಆಫೀಸರ್ 220ಕೆವಿ ಸ್ವೀಕರಣ ಕೇಂದ್ರ ಕೆಪಿಟಿಸಿಎಲ್ ನಲ್ಲಿ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಡಿಸೆಂಬರ್ 20ರ ಬೆಳಿಗ್ಗೆ 10ರಿಂದ ಸಂಜೆ 6 ಗಂಟೆವರೆಗೂ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ. ಸಿಇಓ ಆಫೀಸ್, ಶ್ರೀರಾಮ ನಗರ, ಉದಯ ನಗರ, ಆಜಾದ್ ನಗರ, ಸ್ಟೇಶನ್ ಏರಿಯಾ, ಇಂದಿರಾನಗರ, ಅಶೋಕ್ ಡಿಪೋ, ಗೋಲ್ ಮಾರ್ಕೆಟ್, ಚಾರಾ ಬಜಾರ್, ಮಚ್ಚಿ ಬಜಾರ್, ಕಮೇಲಾ, ಅರಬ್ ಮೊಲ್ಲಾ, ಆಟೋ ನಗರ, ಸಿಯಾತ ಲಾಬ್, ಗಂಜ್ ಸರ್ಕಲ್, ಗೋಶಾಲ ರೋಡ್, ಡಿಸ್ಟಿಕ್ಟ್ ಕೋರ್ಟ್, ಜಿಲ್ಲಾ ಪಂಚಾಯತ್ ಆಫೀಸ್, ಪಿಡಬ್ಲ್ಯುಡಿ, ಬಸವೇಶ್ವರ ಸರ್ಕಲ್, ಫಾರೆಸ್ಟ್ ಆಫೀಸ್, ಫೈರ್ ಸ್ಟೇಶನ್, ವೆರ್ನರಿ ಆಸ್ಪತ್ರೆ, ಕಾಂಗ್ರೆಸ್ ಆಫೀಸ್, ಮಂಚಲಾಪುರ ಕ್ರಾಸ್, ಹೊಸ ಶಿವಂ ಆಸ್ಪತ್ರೆ, ಕ್ಲಾರಿಟಿ ಆಸ್ಪತ್ರೆ, ಭಂಡಾರಿ ಆಸ್ಪತ್ರೆ, ಸುದ್ದಿಮೂಲ, ಹಿಂದಿ ವರ್ಧಮಾನ, ಬಿಎಸ್‌ಎನ್‌ಎಲ್ ಕಚೇರಿ, ಹೊಂಡಾ ಶೋರೂಮ್, ಅಹ್ಮದ್ ಫಂಕ್ಷನ್ ಹಾಲ್, ಸುಣ್ಣಭಟ್ಟಿ, ರೈಲ್ವೆ ಸ್ಟೇಷನ್, ಆಫೀಸರ್ಸ ಕಾಲೋನಿ, ಆಶಾಪುರ ರಸ್ತೆ, ಗುಡ್ ಶೆಡ್ ರಸ್ತೆ, ಐಡಿಎಸ್‌ಎಮ್‌ಟಿ ಲೇಔಟ್, ಪವನ್ ಲೇಔಟ್, ಗ್ಯಾನ್ ಮಂದಿರ, ಆಫಿಸರ್ಸ ಕಾಲೋನಿ, ಮೆಥಡಿಸ್ಟ್ ಚರ್ಚ್, ಜಂಡಕಟ್ಟ, ನವರಂಗ ದರ್ವಾಜ, ಟಿಪ್ಪು ಸುಲ್ತಾನ್‌ರೋಡ್, ಡಿ.ಸಿ. ಆಫೀಸ್ ಮುಂದುಗಡೆ, ಹಾಜಿ ಕಾಲೋನಿ, ಕೋಟ್‌ತಲಾರ್, ಹೊಸ ಸಿಎಮ್‌ಸಿ ಕಚೇರಿ, ಡ್ಯಾಡಿ ಕಾಲೋನಿ, ಆಶ್ರಫೀಯಾ ಕಾಲೋನಿ, ಕಾಕತೀಯ ಕಾಲೋನಿ, ಶಾಂತಿ ಕಾಲೋನಿ, ಡಾಲರ್ಸ್ ಕಾಲೋನಿ, ಪಿಸಿಬಿ ಕಾಲೋನಿ, ಪಾರ್ವತಿ ಕಾಲೋನಿ, ರಾಘವೇಂದ್ರ ಕಾಲೋನಿ, ಸಾರಾ ಟೀವರ್ಸ ಕಾಲೋನಿ, ಒಳ ಚರಂಡಿ ಸಂಸ್ಕರಣ ಘಟಕ ಮಂಚಲಾಪೂರ ರೋಡ್, ಬಸವೇಶ್ವರ ಕಾಲೋನಿ, ಬಂದೇನವಾಜ್ ಕಾಲೋನಿ, ಭಾರತಿ ನಗರ, ಚೆಕ್ಪೋಸ್ಟ್, ಎನ್‌ಜಿಒ ಕಾಲೋನಿ, ಗೌಸಿಯಾ ಕಾಲೋನಿ, ಎಸ್.ಟಿ ನಿಜಾಮುದ್ದೀನ್ ಕಾಲೋನಿ, ದೇವರಾಜ್ ಅರಸ್ ಕಾಲೋನಿ. ಗಾಂಧಿ ಲೇಔಟ್, ಅಶೋಕ್ ಕುಮಾರ್ ಲೇಔಟ್, ಲಿಂಗಸುಗೂರು ರಸ್ತೆ, ಕೃಷಿವಿಶ್ವವಿದ್ಯಾಲಯ ಎದುರುಗಡೆ, ಶಿವಂ ಆಸ್ಪತ್ರೆ, ಎಸ್,ಎನ್.ಟಿ. ಟಾಕೀಸ, ಲೋಹಾರವಾಡಿ, ಗಾಂಧಿ ಚೌಕ, ಬಂದರ್ ಗಲ್ಲಿ, ಎಂ.ಜಿ.ರಸ್ತೆ, ಹರಿಹರ ರಸ್ತೆ, ಮಕ್ತಲ ಪೇಟೆ. ಪಿಂಜರವಾಡಿ, ಶರಣಬಸವೇಶ್ವರ ಆಸ್ಪತ್ರೆ. ಬೆಟ್ಟದೂರ ಆಸ್ಪತ್ರೆ. ಪ್ಯಾರಸ್ ಗಾರ್ಡನ್, ವಡ್ಡಪ್ಪ ಜೀನ್ ಕುಂಬಾರಓಣಿ, ಮಡ್ಡಿ ಪೇಟೆ, ಬ್ರೆಸ್ತಾವಾರ ಪೇಟೆ, ಚಂದ್ರಮಾಲೇಶ್ವರ ಚೌಕ ಬಟ್ಟೆ ಬಜಾರ್ ತರಕಾರಿ ಮಾರ್ಕೆಟ್, ಮೇದರವಾಡಿ ಹೊಸ ಅಮೃತ ಆಸ್ಪತ್ರೆ, ಸಂತೋಷಿ ನೊವಿತಾಲ್ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H